ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9   ಸಂಚಿಕೆ 31   ಆಗಸ್ಟ್ 2, 1987   ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಬೋಫೋರ್ಸ್ ಬಗ್ಗೆ ಚರ್ಚೆಗೆ ನಕಾರ – ವಿರೋಧ ಪಕ್ಷಗಳ ಪ್ರತಿಭಟನೆ

ಸಂಸತ್ತಿನಲ್ಲಿ ಕಾಂಗ್ರೆ ತಂತ್ರ ಫಲಿಸಲಿಲ್ಲ

ಲೋಕಸಭೆ ರಾಜ್ಯಸಭೆಗಳಲ್ಲಿ ಪ್ರಶ್ನೋತ್ತರ ಅವಧಿ ಮುಂದಕ್ಕೆ ಹಾಕಲು–ಬೋಫೋರ್ಸ್ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ವಿರೋಧ ಪಕ್ಷಗಳಿಂದ ನಿರ್ಣಯ ಮಂಡನೆ. ಪ್ರಶ್ನೋತ್ತರ ಅವಧಿಯನ್ನು ಮುಂದಕ್ಕೆ ಹಾಕಲು ಒಪ್ಪಿದ ಸ್ಪೀಕರ್ ಹಾಗೂ ರಾಜ್ಯಸಭಾ ಉಪಸಭಾಪತಿಯಿಂದ ಬೋಫೋರ್ಸ್ ಬಗ್ಗೆ ಚರ್ಚೆಗೆ ವಿರೋಧ ಪಕ್ಷಗಳ ಸೂಚನೆಗೆ ಅಂಗೀಕಾರ ನಿರಾಕರಣೆ ಆದರೆ ಸರಕಾರದ ನಿರ್ಣಯ ಮಂಡಿಸಲು ರಕ್ಷಣಾ ಸಚಿವ ಕೆ.ಸಿ. ಪಂತ್‌ರವರಿಗೆ ಸ್ಪೀಕರ್ ಅವಕಾಶ. ಇದನ್ನು ಪ್ರತಿಭಟಿಸಿ ವಿರೋಧ ಪಕ್ಷಗಳ ಸದಸ್ಯರು ಆಸನಗಳನ್ನು ಬಿಟ್ಟು ಲೋಕಸಭೆಯ ಸ್ಪೀಕರ್ ಹಾಗೂ ರಾಜ್ಯಸಭೆಯ ಉಪಸಭಾಪತಿಯವರ ಮುಂದೆ ಹೋಗಿ ನಿಂತು ಪ್ರತಿಭಟನೆ ಸಿ.ಪಿ.ಐ. (ಎಂ)ಲೋಕಸಭಾಸದಸ್ಯ ಅಜೋಯ್ ಬಿಸ್ವಾಸ್‌ರವರು ಕೆ.ಸಿ.ಪಂತ್ ಕೈಯಲ್ಲಿದ್ದ ನಿರ್ಣಯ ಪ್ರತಿಯನ್ನು ಸೆಳೆದುಕೊಂಡರು. ಲೋಕಸಭೆ ಹಾಗೂ ರಾಜ್ಯಸಭೆ ಎರಡೆರಡು ಬಾರಿಮುಂದಕ್ಕೆ ಕೊನೆಗೆ ಯಾವ ಕಲಾಪವನ್ನು ನಡೆಸದೆ ಎರಡು ದಿನ ಮುಂದೆ ಹೋದವು. ಅಜೋಯ್ ಬಿಸ್ವಾಸ್‌ರವರನ್ನು ಲೋಕಸಭೆಯಿಂದ ಸಸ್ಪೆಂಡ್ ಮಾಡಲು ಕಾಂಗ್ರೆ ನಿರ್ಧಾರ ಅಜೋಯ್‌ಬಿಸ್ವಾಸ್‌ರವರಿಂದ ಉದ್ರಿಕ್ತ ಕ್ಷಣದಲ್ಲಿ ನಡೆದ ತಪ್ಪಿಗೆ ಕ್ಷಮಾಯಾಚನೆ– ಆದರೂ ಬಿಡದೆ ಇಲ್ಲಿಯವರೆಗಿನ ಎಲ್ಲಾ ಸಂಸದೀಯ ಸದಾಚಾರವನ್ನು ಗಾಳಿಗೆ ತೂರಿ ಇಡೀ ಅಧಿವೇಶನದ ಅವಧಿಗೆ ಸಸ್ಪೆಂಡ್. ತನ್ನ ಪಶುಸಮಾನ ಬಹುಮತವನ್ನು ದುರುಪಯೋಗಪಡಿಸಿಕೊಂಡು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಪ್ರಜಾಸತ್ತಾತ್ಮಕ ಚರ್ಚೆಯನ್ನು ವಂಚಿಸಲು ಪ್ರಯತ್ನಿಸುತ್ತಿರುವ ಕಾಂಗ್ರೆ ನೀತಿಯಬಗ್ಗೆ ವಿರೋಧ ಪಕ್ಷಗಳಿಂದ ಲೋಕಸಭೆ ಅಧಿವೇಶನಕ್ಕೆ ಬಹಿಷ್ಕಾರ. ಶುಕ್ರವಾರದ ಪತ್ರಿಕೆಗಳು ವರದಿ ಮಾಡಿರುವಂತೆ ಅಜೋಯ್ ಬಿಸ್ವಾಸ್‌ರವರ ಸಸ್ಪೆಂಡ್ ಕ್ರಮವನ್ನು ಹಿಂತೆಗೆದುಕೊಳ್ಳಲಾಯಿತು. ವಿರೋಧ ಪಕ್ಷಗಳಿಂದ ಲೋಕಸಭೆಯ ಬಹಿಷ್ಕಾರ ಹಿಂತೆದುಕೊಳ್ಳುವ ಕ್ರಮ.

ರಾಜ್ಯಸಭೆಯಲ್ಲಿ ಉಪಸಭಾಪತಿ ಪ್ರತಿಭಾ ಪಾಟೀಲ ರಿಂದ ವಿರೋಧ ಪಕ್ಷಗಳ ಅವಹೇಳನ. ವಿರೋಧಪಕ್ಷಗಳ ಪ್ರತಿಭಟನೆ. ಶುಕ್ರವಾರ ಕೂಡ ಬೊಫೋರ್ಸ್‌ಬಗ್ಗೆ ಚರ್ಚಿಸಲು ಆಡಳಿತ ಪಕ್ಷ ಒಪ್ಪದ್ದರಿಂದ ಇಡೀ ದಿನ ರಾಜ್ಯಸಭೆಯ ಅಧಿವೇಶನ ಮುಂದೂಡಿಕೆ.

ಇವಿಷ್ಟು ಸಂಸತ್ತಿನ ಮಳೆಗಾಲದ ಅಧಿವೇಶನ ಆರಂಭವಾದ ಮೊದಲ ವಾರದ ಘಟನೆಗಳು. ಈ ಘಟನೆಗಳ ಮೂಲ ಕಾರಣವೇನು? ಇದು ಎಲ್ಲ ನಾಗರಿಕರೂಯೋಚಿಸಬೇಕಾದ ಸಂಗತಿ.

ಈ ಎಲ್ಲಾ ಘಟನೆಗಳಿಗೆ ಪತ್ರಿಕೆಗಳ ಪ್ರತಿಕ್ರಿಯೆ ವಿಭಿನ್ನರೀತಿಯಲ್ಲಿವೆ. ಕೆಲವು, ವಿರೋಧ ಪಕ್ಷಗಳ ಪ್ರತಿಕ್ರಿಯೆ ಅನಿವಾರ್ಯ ಎಂದರೆ ಮತ್ತೆ ಕೆಲವು

ಸಂಸತ್ತಿನ ಮಳೆಗಾಲದ ಅಧಿವೇಶನ, ಆರಂಭವಾದ ಕ್ಷಣದಿಂದ ಕಲಾಪಗಳೇ ಇಲ್ಲ. ದಿನ ಗಟ್ಟಲೇ ಮುಂದೂಡಿಕೆ ವಿರೋಧ ಪಕ್ಷಗಳಿಂದ ಬಹಿಷ್ಕಾರ ಇದೆಲ್ಲಾ ಏಕೆ ?

[8ನೇ ಪುಟ ನೋಡಿ]

ಆಗಸ್ಟ್ 3 ರ ಕಾರ್ಮಿಕ ಹೋರಾಟ

ಕೇಂದ್ರ ಸರ್ಕಾರದ ಆರ್ಥಿಕ ನೀತಿಯ ಪರಿಣಾಮವಾಗಿ ಉಂಟಾಗಿರುವ ಪರಿಸ್ಥಿತಿಯನ್ನೆದುರಿಸಲು ಕಾರ್ಮಿಕ ವರ್ಗ ಹೋರಾಟದ ದಾರಿಗಿಳಿದಿರುವುದನ್ನು ಕಂಡೆ ರಾಜೀವ್ ಸರ್ಕಾರ ಕಾರ್ಮಿಕರಿಗೆ ಸಂಬಂಧಪಟ್ಟ ಕಾಯಿದೆಗಳಿಗೆ ತಿದ್ದುಪಡಿ ತಂದು, ದುಡಿಯುವ ಜನತೆಯ ಸಂಘಟನಾ,ಮತ್ತು ಹೋರಾಟದ ಹಕ್ಕನ್ನೇ ಮೊಟಕುಗೊಳಿಸುವ ತಯಾರಿಯಲ್ಲಿದೆ. ಕಾರ್ಮಿಕ ಮಂತ್ರಿ ಸಂಗ್ಮಾ ಅವರು ತಮ್ಮ ನಿಲುವೆಯನ್ನು ಬಹಿರಂಗಗೊಳಿಸಿದ್ದಾರೆ.

1. ಕಾರ್ಮಿಕ ಹಕ್ಕುಗಳನ್ನು ನಿರಾಕರಿಸುವ ಪ್ರತಿಗಾಮಿ ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ಹಿಂತೆಗೆಯಿರಿ.

2. ತುಟ್ಟಿಭತ್ಯಲೆಕ್ಕಾಚಾರಕ್ಕೆ 1960ರ ಆಧಾರಿತ ಬೆಲೆ ಸೂಚ್ಯಾಂಕ ಬಿಟ್ಟುಹೊಸದ 1982ರ ಬೆಲೆ ಸೂಚ್ಯಾಂಕಕ್ಕೆ ಬದಲಾಯಿಸುವುದನ್ನು ನಿಲ್ಲಿಸಿರಿ.

3. ಎಲ್ಲಾ ಉದ್ಯೋಗಿಗಳಿಗೂ ಮಾಸಿಕ 700ರೂ. ಕನಿಷ್ಟ ವೇತನ ನೀಡಿರಿ.

ಸರ್ಕಾರದ ಈ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಆಗಸ್ಟ್3ರಂದು ದೇಶದಾದ್ಯಂತ ಮುಷ್ಕರ ಮತ್ತು ಪಿಕೆಟಿಂಗ್ ನಡೆಸಿ ಸರ್ಕಾರ ತನ್ನ ನಿಲುವೆ ಬದಲಿಸುವಂತೆ ಒತ್ತಾಯಿಸಬೇಕೆಂದು ರಾಷ್ಟ್ರೀಯ ಚಳುವಳಿ ಸಮಿತಿ ಎಲ್ಲ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ. ಈ ಕರೆಯನ್ನು ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣ ಯಶಸ್ವಿಗೊಳಿಸಬೇಕೆಂದು ಜುಲೈ28ರಿಂದ 30ರವರೆಗೆ ಮೈಸೂರಿನಲ್ಲಿ ಸೇರಿದ ಸಿ.ಐ.ಟಿ.ಯು.ಕರ್ನಾಟಕ ರಾಜ್ಯ ಮಂಡಳಿಯ ಸಭೆ ಕಾರ್ಮಿಕ ವರ್ಗಕ್ಕೆ ಕರೆ ನೀಡಿ .

ಭಾರತ–ಶ್ರೀಲಂಕಾ ಒಪ್ಪಂದಕ್ಕೆ ಲಂಕಾ ಕಮ್ಯೂನಿಸ್ಟ್ ಪಕ್ಷದ ಸ್ವಾಗತ.

ಶ್ರೀಲಂಕಾ ಕಮ್ಯೂನಿಸ್ಟ್‌ಪಾರ್ಟಿಯ ಚೇರಮನ್ ಪೀಟರ್ ಕೆನಮನ್‌ರವರು ಭಾರತ ಹಾಗೂ ಶ್ರಿಲಂಕಾದ ನಡುವೆ ಆದ ಒಪ್ಪಂದವನ್ನು ಸಾವಿರಾರು ಜನರ ಮರಣಕ್ಕೆ ಲಕ್ಷಾಂತರ ಜನರು ಮನೆ ಕಳೆದುಕೊಳ್ಳುವುದಕ್ಕೆ ಕಾರಣವಾದ ಈ ಅರಿವುಗೇಡಿ ಆಂತರಿಕ ಯುದ್ಧಕ್ಕೆ ವಿರಾಮ ಹಾಕುವ ಒಪ್ಪಂದ ಎಂದು ಸ್ವಾಗತಿಸಿದ್ದಾರೆ.

ಬಿಗಡಾಯಿಸುತ್ತಿರುವ ರಾಜಕೀಯ ಬಿಕ್ಕಟ್ಟಿನಲ್ಲಿ

ಹೊಸ ರಾಷ್ಟ್ರಪತಿಗಳ ಪಾತ್ರವೇನು ?

– ಇ. ಎಂ. ಎಸ್.

ಘಟನೆಗಳು ಕಳೆದವಾರದ ಲೇಖನದಲ್ಲಿ ನಿರೀಕ್ಷಿಸುದಕ್ಕಿಂತಲೂ ವೇಗವಾಗಿ ನಡೆದು ಹೋಗಿವೆ. ರಾಷ್ಟ್ರಪತಿ ಚುನಾವಣೆಯ ಫಲಿತಾಂಶ ಬರುವ ಎಷ್ಟೋ ಮೊದಲೇ ಕಾಂಗ್ರೆಸ್ ಪಕ್ಷದೊಳಗಿನ ಸಮಸ್ಯೆಗಳು ಬಿಗಡಾಯಿಸಲಾರಂಭಿಸಿದವು.

ಚುನಾವಣೆ ನಡೆದ 24ಗಂಟೆಗಳ ನಂತರ, ಫಲಿತಾಂಶ ಬರುವ 48ಗಂಟೆಗಳ ಮೊದಲೇ ಕೇಂದ್ರ ಪ್ರವಾಸ ಮಂತ್ರಿ ಮುಫ್ತಿ ಮಹಮ್ಮದ್ ಸೈಯದ್ "ದೇಶದ ಜಾತ್ಯತೀತ ಚೌಕಟ್ಟು ನುಜ್ಜುನುಜ್ಜಾಗುತ್ತಿರುವುದನ್ನು ನೋಡುವುದು ಒಂದು ಅಸಹ್ಯವೇದನೆ.... ಪ್ರತಿಗಾಮಿತನ ಮತ್ತು ಕೋಮುವಾದದ ದುಷ್ಟ ಶಕ್ತಿಗಳು ಶಕ್ತಿಶಾಲಿಯಾಗುತ್ತಿವೆ" ಎಂದು ಹೇಳಿ ಮಂತ್ರಿಮಂಡಲದಿಂದ ರಾಜೀನಾಮೆ ನೀಡಿದರು.

ಪ್ರಧಾನ ಮಂತ್ರಿ ಮತ್ತು ಅವರ ಸಹೋದ್ಯೋಗಿಗಳು ಎದುರಿಸುತ್ತಿರುವ ಸಮಸ್ಯೆ ಕೇವಲ ಕೆಲವು ಮುಖಂಡರ ಗು..ಪು ಜಗಳವಲ್ಲ, ಧೋರಣೆಗಳ ಬಗ್ಗೆ ಕೇ..ವು ಗಂಭೀರ ಭಿನ್ನಾಭಿಪ್ರಾಯಗಳೂ ಇ..ವೆಲ್ಲವೆ ಎಂದು ನಾವು ಕಳೆದ ವಾರ ಹೇ..ದು ಸರಿಯೆಂಬುದು ಇದು ತೋರಿಸಿ..ಟ್ಟಿದೆ. ಮುಫ್ತಿಯವರ ರಾಜೀನಾಮೆಯ 24ಗಂಟೆಯೊಳಗೆ ಮಾಜಿ ಹಣಕಾಸು ಮತ್ತು ರಕ್ಷಣಾ ಮಂತ್ರಿ ವಿ.ಪಿ.ಸಿಂಗ್‌ರ ಪತ್ರ ಇದನ್ನು ಮತ್ತೊಮ್ಮೆ ತೋರಿಸಿಕೊಟ್ಟಿತು. ಕಾರ್ಮಿಕರೊಡನೆ ಸಂಬಂಧಗಳು, ಚುನಾವಣಾ ಹಣಕಾಸು ವ್ಯವಸ್ಥೆ, ಬಂಡವಾಳದ ಪಲಾಯನ, ಸ್ವಿಸ್‌ಬ್ಯಾಂಕ್‌ಗಳಲ್ಲಿ ಹಣ ಇತ್ಯಾದಿ ಧೋರಣೆಗಳನ್ನು ಕುರಿತಾದ ಪ್ರಶ್ನೆಗಳನ್ನೆತ್ತಿದ ಈ ಪತ್ರ ಪ್ರಧಾನ ಮಂತ್ರಿಯವರ ಧೋರಣೆಗಳನ್ನೂ ಕುರಿತಂತೆ ಎಸೆದ ಒಂದು ಬಹಿರಂಗ ಸವಾಲು.

ಮುಫ್ತಿಯವರು ಮತ್ತು ಅವರಿಗೆ ಮೊದಲು ಆರಿಫ್‌ಮಹಮ್ಮದ್ ಖಾನ್ ಕೋಮು ಶಕ್ತಿಗಳೊಂದಿಗೆ ಮೈತ್ರಿ

[8ನೇ ಪುಟ ನೋಡಿ]

ಕಾ|| ನೃಸಿಂಘ ಚಕ್ರವರ್ತಿ ನಿಧನ

ಪಿ. ಬಿ. ಸಂತಾಪ

ಜುಲೈ 23ರಂದು,ಮಾಸ್ಕೊದಲ್ಲಿ ತುರ್ತು ಚಿಕಿತ್ಸೆ ಪಡೆಯುವಾಗ ನಿಧನರಾದ ಪಕ್ಷದ ಕೇಂದ್ರ ಸಮಿತಿ ಸದಸ್ಯ ಕಾಂ. ನೃಸಿಂಘ ಚಕ್ರವರ್ತಿಯವರ ನಿಧನಕ್ಕೆ ಪಾಲಿಟ್ ಬ್ಯೂರೋ ಸಂತಾಪ ವ್ಯಕ್ತಪಡಿಸಿದೆ. 1940ರ ದಶಕದಲ್ಲಿಯೇ ರೈಲ್ವೆ ಕೆಲಸಗಾರನಾಗಿ ಜೀವನ ಆರಂಭಿಸಿ ಕಾರ್ಮಿಕ ಚಳುವಳಿಯಲ್ಲಿ ಅತ್ಯುನ್ನತ ಸ್ಥಾನವನ್ನು ಗಳಿಸಿದ, 1974ರ ರೈಲ್ವೆ ಕಾರ್ಮಿಕರ ಐತಿಹಾಸಿಕ ಚಳುವಳಿಯಲ್ಲಿ ಮಹತ್ವದ ಪಾತ್ರವಹಿಸಿದ ಕಾಂ. ನೃಸಿಂಘ ಚಕ್ರವರ್ತಿಯವರಿಗೆ 62 ವರ್ಷ ವಯಸ್ಸಾಗಿತ್ತು.

1952 ರಲ್ಲಿ ಪಕ್ಷಕ್ಕೆ ಸೇರಿದ ಇವರು ಪಕ್ಷಕ್ಕಾಗಿ ಮಾಡಿದ ದುಡಿಮೆಯಿಂದ 1978ರ ಜಲಂಧರ ಅಧಿವೇಶನದಲ್ಲಿ ಕೇಂದ್ರ ಸಮಿತಿ ಸ್ಥಾನವನ್ನು ಗಳಿಸಿದರು. ಪಕ್ಷ ತನ್ನ ಕೆಂಪು ಪತಾಕೆಯನ್ನು ಬಾಗಿಸಿ ಅಗಲಿದ ಸಂಗಾತಿಗೆ ತನ್ನ ಗೌರವವನ್ನು ಸಲ್ಲಿಸುತ್ತದೆ ಎಂದು ಪಿ.ಬಿ. ಹೇಳಿದೆ.

ಅಗಲಿದ ಸಂಗಾತಿ ಕಾಂ. ನೃಸಿಂಘ ಚಕ್ರವರ್ತಿಯವರಿಗೆ "ಐಕ್ಯರಂಗ" ತನ್ನ ಅತೀವ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಕೈಗಾರಿಕಾ ಬಿಕ್ಕಟ್ಟು ಹಾಗೂ ಕಾರ್ಮಿಕ ಚಳುವಳಿಗಳು

ಸಾಮಾಜಿಕ-ಆರ್ಥಿಕ ವಿಶ್ಲೇಷಣೆ ಮತ್ತು ಸರಿಯಾದ ರಾಜಕೀಯ ಮಾರ್ಗ ನಮ್ಮ ಕಾರ್ಯತಂತ್ರದ ಮುಖ್ಯ ಆಧಾರಗಳಾಗಬೇಕು. ಆದರೆ ಇದರ ಬದಲು ಎಲ್ಲಾ 'ಮ್ಯಾನೇಜ್‌ಮೆಂಟ್'ಗಳು ತಾವು ಕಷ್ಟದಲ್ಲಿದ್ದೇವೆಂದೇ ಹೇಳುತ್ತಾರೆ,ಅದರ ಬಗ್ಗೆ ನಾವು ತಲೆಕೆಡಿಸಿಕೊಳ್ಳಬೇಕಾಗಿಲ್ಲ, ಅವರ ಮೇಲೆ ಧಾಳಿ ಮಾಡುವುದಷ್ಟೇ ನಮ್ಮ ಗುರಿಯಾಗಬೇಕು. ಇತ್ಯಾದಿ ಪಗುರವಾದ, ಸರಳೀಕೃತ ವಾದಗಳನ್ನು ನಮ್ಮ ಸಂಗಾತಿಗಳು ಒಡ್ಡುತ್ತಾರೆ. ಸುಮಾರಾಗಿ ಎಲ್ಲಾ ಬಂಡವಾಳಶಾಹಿಗಳು ಸರಿಯಾದ ಚಿತ್ರವನ್ನು ನಮ್ಮ ಮುಂದಿಡುವುದಿಲ್ಲ ಎಂಬುದೇನೋ ನಿಜ.ಆದರೆ ಮಾರ್ಕ್ಸ್‌ವಾದಿಗಳಾದ ನಮಗೆ ಸಿಕ್ಕ ಸಂಗಾತಿಗಳನ್ನೇ ಕಲೆಹಾಕಿ ವಿಶ್ಲೇಷಿಸಿ ನಮ್ಮದೇ ತೀರ್ಮಾನಗಳಿಗೆ ಬರುವುದೇನೂ ಕಷ್ಟವಲ್ಲ. ಪ್ರತಿಯೊಬ್ಬ ಬಂಡವಾಳಶಾಹಿಯ ಪ್ರತಿಯೊಂದು ಹೇಳಿಕೆಯೂ ಸುಳ್ಳು ಎಂದು ತಳ್ಳಿಹಾಕುವುದರಿಂದ ವಾಸ್ತವಾಂಶಗಳು ಮುಸುಕಾಗುತ್ತವೆ. ಅದೇ ರೀತಿ ಪ್ರತಿಯೊಂದು ಬಂಡವಾಳಶಾಹೀ ಉದ್ದಿಮೆಯೂ ಆರೋಗ್ಯಕರ ಸ್ಥಿತಿಯಲ್ಲಿದೆ ಎಂದು ಭಾವಿಸುವುದೂ ಕೂಡ ಮಾರ್ಕ್ಸ್‌ವಾದಕ್ಕೆ ತದ್ವಿರುದ್ಧವಾಗುತ್ತದೆ. ಮಾರ್ಕ್ಸ್‌ವಾದದ ಅ-ಆ-ಇ ಕೂಡ ಗೊತ್ತಿಲ್ಲದವರು ಮಾತ್ರ ಇಂತಹ ಸರಳೀಕೃತ ತೀರ್ಮಾನಗಳಿಗೆ ಬರಲು ಸಾಧ್ಯ. ವಿಶ್ಲೇಷಣಾತ್ಮಕ ನಿಲುವು ಮಾರ್ಕ್ಸ್‌ವಾದದ ತಿರುಳು. ಮಾರ್ಕ್ಸ್‌ರವರ ಬೃಹತ್ ಕೃತಿ "ಕ್ಯಾಪಿಟಲ್" ಬಂಡವಾಳಶಾಹಿಯ ವಿಶ್ಲೇಷಣೆಗೆ ಸಂಬಂಧಪಟ್ಟದ್ದು ಎಂದು ಈ ಸಂಗಾತಿಗಳಿಗೆ ತಿಳಿದಿದೆಯೇ ? ಬಂಡವಾಳಶಾಹಿಯ ಅತ್ಯಂತ ಸೂಕ್ಷ್ಮ ಅಂಶವಾದ ಸರಕು, ಮೌಲ್ಯದ ಬೇರೆ ಬೇರೆ ರೂಪಗಳು, ಹಣ, ಮಿಗುತಾಯ ಮೌಲ್ಯವನ್ನು ಕಿತ್ತುಕೊಳ್ಳುವುದು, ಬಂಡವಾಳದ ಶೇಖರಣೆ, ಬಿಕ್ಕಟ್ಟು, ಬಿಕ್ಕಟ್ಟಿನ ಸಾಮಾನ್ಯ ಮತ್ತು ಮತ್ತೆ-ಮತ್ತೆ ಮರುಕಳಿಸುವ ಸ್ವಭಾವ ಇತ್ಯಾದಿಗಳನ್ನು ವಿಶ್ಲೇಷಿಸಿ ಮಾರ್ಕ್ಸ್ ಸಿದ್ಧಾಂತಗಳನ್ನು ರೂಪಿಸಿದರು ಎಂಬುದು ಈ ಸಂಗಾತಿಗಳಿಗೆ ತಿಳಿದಿದೆಯೇ ? ಮೂಲಭೂತ ಕೃತಿಯಾದ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಕೂಡ ಬಂಡವಾಳಶಾಹಿ ಪದ್ಧತಿಯನ್ನು, ಅದರ ಉಗಮ, ಬೆಳವಣಿಗೆ, ಅದರ ಉತ್ಪಾದನೆಯ ಅರಾಜಕ ಸ್ವರೂಪ, ಬಿಕ್ಕಟ್ಟು ಇತ್ಯಾದಿಗಳನ್ನು ವಿಶ್ಲೇಷಿಸುತ್ತದೆ ಎನ್ನುವುದು ಅವರಿಗೆ ಗೊತ್ತಿದೆಯೇ ? ಬಂಡವಾಳಶಾಹಿ ಪದ್ಧತಿ ಬಿಕ್ಕಟ್ಟುಮಯವಾಗಿದೆ ಎನ್ನುವ ಸಂಗತಿ ಮಾರ್ಕ್ಸ್‌ವಾದದ ಮೂಲಭೂತ ಅಂಶ. ನಾವಿಂದು ವಿಶ್ವ ಮತ್ತು ರಾಷ್ಟ್ರೀಯ ಆರ್ಥಿಕ ಪರಿಸ್ಥಿತಿಯನ್ನು ಪರೀಕ್ಷಿಸಲು ಸಾಧ್ಯ. ಮತ್ತು ಮುಂದುವರೆದು ಜಾಗತಿಕ, ರಾಷ್ಟ್ರೀಯ ಹಾಗೂ ಒಂದು ವಿಶಿಷ್ಟ ಕ್ಷೇತ್ರದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಒಂದು ನಿರ್ದಿಷ್ಟ ಕಂಪನಿಯ ಸ್ಥಿತಿಯನ್ನು ಪರಿಶೀಲಿಸಬಹುದು.

ವಿಶ್ವ ಮತ್ತು ದೇಶದ ಆರ್ಥಿಕ ಪರಿಸ್ಥಿತಿ

ನಮ್ಮ ಪಕ್ಷದ ಹತ್ತು, ಹನ್ನೊಂದು ಮತ್ತು ಹನ್ನೆರಡನೇ ಮಹಾಧಿವೇಶನಗಳ ದಸ್ತಾವೇಜುಗಳು ವಿಶ್ವ ಆರ್ಥಿಕ ಪರಿಸ್ಥಿತಿಯನ್ನು ವಿವರವಾಗಿ ಪರಿಶೀಲಿಸಿವೆ. ದ್ವಿತೀಯ ಮಹಾ ಯುದ್ಧದ ನಂತರ ಮೊತ್ತ ಮೊದಲ ಬಾರಿಗೆ ಎಲ್ಲಾ ಬಂಡವಾಳಶಾಹಿ ದೇಶಗಳನ್ನು ಒಟ್ಟಿಗೇ ತಟ್ಟಿದ ಬಿಕ್ಕಟ್ಟು ಯುದ್ಧಾನಂತರ ಬಂಡವಾಳಶಾಹಿ ವ್ಯವಸ್ಥೆ ಕಂಡಿರುವ ಅತ್ಯಂತ ಆಳವಾದ ಬಿಕ್ಕಟ್ಟು ಎಂದು ಎಂಟನೇ(ಜಾಲಂಧರ್ 1978) ಅಧಿವೇಶನದ ರಾಜಕೀಯ ಠರಾವು 1972ರ ಮಧುರೈ ಮಹಾಧಿವೇಶನದ ನಂತರದ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ ಹೇಳಿತು. ಹಿಂದಿನ ಬಿಕ್ಕಟ್ಟುಗಳಂತೆ ಕೇವಲ ಉತ್ಪಾದನೆ ಮತ್ತು ಬಳಕೆಯ ಕ್ಷೇತ್ರಗಳನ್ನು ಮಾತ್ರವೇ ಅಲ್ಲ, ಹಣಕಾಸು ಮತ್ತು ಲೇವಾದೇವಿ ಕ್ಷೇತ್ರಗಳನ್ನು ಆವರಿಸಿದೆ. ಹನ್ನೊಂದನೇ (ವಿಜಯವಾಡ 1982) ಮಹಾಧಿವೇಶನ ಹಾಗೂ ಕಲ್ಕತ್ತಾ ಅಧಿವೇಶನ ಇದನ್ನು ಪುನರುಚ್ಚರಿಸಿವೆ.1970ರ ದಶಕದಲ್ಲಿ ಕಾಣಲಾರಂಭಿಸಿದ ಬಿಕ್ಕಟ್ಟಿನ ಪರಿಣಾಮ ಇನ್ನೂ ಮುಂದುವರಿಯುತ್ತಿದೆಎಂದಿದೆ.

ರಾಷ್ಟ್ರೀಯ ಆರ್ಥಿಕ ಪರಿಸ್ಥಿತಿ ತುಂಬಾ ನಿರಾಶಾದಾಯಕ ಎನ್ನುವುದನ್ನಂತೂ ನಮ್ಮ ಈಸಂಗಾತಿಗಳುಅರ್ಥಮಾಡಿಕೊಳ್ಳಬಲ್ಲರು. ಇತ್ತೀಚೆಗೆ ಮುಕ್ತಾಯಗೊಂಡ ಸಿ.ಐ.ಟಿ.ಯು ನ ಆರನೇ ಸಮ್ಮೇಳನ(ಮುಂಬೈ-ಮೇ 1987) ರೋಗಗ್ರಸ್ತ ಉದ್ದಿಮೆಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಪರಿಶೀಲಿಸುತ್ತಾ ಡಿಸೆಂಬರ್ 1985ರ ವೇಳೆಗೆ ಈ ಸಂಖ್ಯೆ 1,19,606 ಆಗಿತ್ತು. ಹಾಗೂಇವುಗಳಲ್ಲಿ 4267ಕೋಟಿ ರೂ ಮುಳುಗಿ ಹೋಗಿದೆ ಎಂದು ಉಲ್ಲೇಖಿಸಿದೆ. ಕಾರ್ಖಾನೆಗಳಲ್ಲಿ ದುಡಿಯುತ್ತಿರುವವರ ಸಂಖ್ಯೆ 2.45 ಕೋಟಿಯಿದ್ದರೆ, ಅತ್ತ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ದಾಖಲಾದನಿರುದ್ಯೋಗಿಗಳ ಸಂಖ್ಯೆ 3.01 ಕೋಟಿ ಎಂದೂ ಸಿ.ಐ.ಟಿ.ಯು.ಸಮ್ಮೇಳನಗಮನಿಸಿತು.

ಕಾಂ. ವಿ.ಜೆ.ಕೆ.ಯವರ "ಕಾರ್ಮಿಕ ರಂಗ"ದಲ್ಲಿ ಕೆಲವು ಪಂಥವಾದಿ ಪ್ರವೃತ್ತಿಗಳು ಲೇಖನದ ಮುಂದುವರಿದ ಭಾಗ.

ಕಾಗದ ಉದ್ದಿಮೆ ಒಂದು ಉದಾಹರಣೆ

ಒಂದು ನಿರ್ದಿಷ್ಟ ಕೈಗಾರಿಕಾ ಘಟಕದ ಕಾರ್ಯ ನಿರ್ವಹಣೆಯನ್ನು ಭಾರತದಾದ್ಯಂತ ಆ ಕೈಗಾರಿಕೆಯ ಕಾರ್ಯನಿರ್ವಹಣೆಯೊಂದಿಗೆ ಹೋಲಿಸಬಹುದು. ಉದಾಹರಣೆಗೆ, ಕಾಗದ ಉದ್ದಿಮೆಯ ಬಗ್ಗೆ ಇಡೀ ಭಾರತದ ಚಿತ್ರವನ್ನು ಮೂರುವರ್ಷಗಳ ಕಾರ್ಯ ನಿರ್ವಹಣೆಯನ್ನು ಹೋಲಿಸಿ ನೋಡೋಣ. (1982-83 ನಂತರದ ಅಖಿಲ ಭಾರತ ಅಂಕೆಸಂಖ್ಯೆಗಳು ಈ ಲೇಖಕನ ಬಳಿ ಇಲ್ಲ.

ನಿವ್ವಳ ಮೌಲ್ಯದಲ್ಲಿ ಲಾಭದ ಶೇಕಡಾವಾರು 1982-83 ರಲ್ಲಿ ಕಾಗದ ಉದ್ದಿಮೆಯಲ್ಲಿ ಅತ್ಯಂತ ಕಡಿಮೆಯದ್ದಾಗ ವೆಸ್ಟ್‌ಕೋಸ್ಟ್ ಪೇಪರ್‌ಮಿಲ್ (WCPM)ನಲ್ಲೂ ಅದು ಅತ್ಯಂತ ನಿಕೃಷ್ಟವಾಗಿತ್ತು. ಅಂದರೆ ನಿವ್ವಳ ಮೌಲ್ಯದ 8.47 ನಷ್ಟ. ಆದರೆ ಮರುವರ್ಷ WCPMನಲ್ಲಿಚೇತರಿಕೆ ಕಂಡುಬಂದು ಲಾಭ 7.48 ಆಯಿತು ಇದು ಪ್ರಸಕ್ತ ವರ್ಷಕ್ಕೆ ಬರುವಾಗ3.2ಕ್ಕಿಳಿದಿದೆ. ಕಳೆದ ಐದು ವರ್ಷಗಳ ಸರಾಸರಿ ಲಾಭ 2.688. ವರ್ಷಗಳ ಅಖಿಲ ಭಾರತ ಅಂಕೆಸಂಖ್ಯೆ ಪ್ರಕಾರ ಸರಾಸರಿ ಲಾಭ 3.7.

ಎಲ್ಲಾ ಉದ್ದಿಮೆಗಳ ಅಂಕೆ ಸಂಖ್ಯೆಗಳನ್ನು ಹೋಲಿಸಿದಾಗ ಕಾಗದ ಉದ್ದಿಮೆ ಅತ್ಯಂತ ನಿಕೃಷ್ಟ 1.1% ಲಾಭ ಪಡೆದ 1982-83ರಲ್ಲಿ ಸಿಮೆಂಟ್ ಉದ್ಯಮ ಎಲ್ಲಾ ಉದ್ದಿಮೆಗಳಲ್ಲೇ ಅತೀ ಹೆಚ್ಚು ಲಾಭ(33.9) ಪಡೆದಿತ್ತು. ಈ ಅವಧಿಯಲ್ಲಿ ಎಲ್ಲಾ ಉದ್ದಿಮೆಗಳ ಸರಾಸರಿ ಲಾಭ ದರ 1980-81ರಲ್ಲಿ 14.2% 1981-82ರಲ್ಲಿ 13.4% ಹಾಗೂ 1982—83 ರಲ್ಲಿ 11% ಇತ್ತು. ಮಾರ್ಕ್ಸ್ ವಿವರಿಸಿದಂತೆ ಲಾಭದರದಲ್ಲಿ ಕ್ರಮೇಣ ಇಳಿತ ಬಂಡವಾಳಶಾಹಿಯ ಒಂದು ಮೂಲಭೂತ ನಿಯಮ. ಆದರೆ ಇದರಿಂದ ಗುತ್ತೇದಾರಿಗಳು ಅಪಾರ ಲಾಭ ಸೂರೆಮಾಡುವಲ್ಲಿ ಏನೂ ಅಡ್ಡಿಯಾಗುವುದಿಲ್ಲ. ಅವರು ತಮ್ಮ ಬಂಡವಾಳವನ್ನು ಒಂದು ಉದ್ದಿಮೆಯಿಂದ ಇನ್ನೊಂದಕ್ಕೆ ಸ್ಥಳಾಂತರಿಸುತ್ತಾರೆ. ಸರಕಾರದ ಧೋರಣೆಯ ಮೇಲೆ ಪ್ರಭಾವ ಬೀರಿ ಅದರಿಂದ ಸ್ವಂತಕ್ಕೆ ಪ್ರಯೋಜನ ಪಡೆಯುತ್ತಾರೆ.

ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್‌ನಲ್ಲಿ ಮೂಲ ಬಂಡವಾಳ ತೊಡಗಿಸಿದ್ದ ಅದೇ ಗುತ್ತೇದಾರಿ ಗುಂಪಿನ ದಿಗ್ವಿಜಯ್ ಸಿಮೆಂಟ್ಸ್ ಪೇಪರ್ ಉದ್ದಿಮೆ ಬಹಳ ಲಾಭದಾಯಕ ಎಂದು ಕಂಡುಬಂದಿದ್ದಾಗ ಅವರು ಈ ಪೇಪರ್ ಮಿಲ್ಲನ್ನು ಆರಂಭಿಸಿರಬಹುದು. ಈ ಸಿಮೆಂಟ್ ಉದ್ದಿಮೆ ಅತ್ಯಂತ ಹೆಚ್ಚು ಲಾಭದಾಯಕ ಎಂದು ಕಂಡು ಬರುವಾಗ ಈ ಪೇಪರ್ ಮಿಲ್ಲಿನಲ್ಲಿ ಬಂಡವಾಳ ತೊಡಗಿಸುವದನ್ನು ನಿಲ್ಲಿಸಿ ಸಿಮೆಂಟ್ ಕಾರ್ಖಾನೆಯಲ್ಲಿ ತೊಡಗಿಸುತ್ತಾರೆ. ಇದೇ ರೀತಿಯಲ್ಲಿ ಲಾಭದಾಯಕವನ್ನು ಗಮನದಲ್ಲಿಟ್ಟುಕೊಂಡು ಬದಲಾವಣೆ ಮಾಡುತ್ತಿರುವುದರ ಜೊತೆಗೆ ಭಾಗಶ: ಸಿಮೆಂಟ್ ಕಂಟ್ರೋಲ್, ಬಿಳಿಯ ಮುದ್ರಣ ಕಾಗದದ ಬೆಲೆಯ ಮೇಲೆ ಹತೋಟಿ ಇತ್ಯಾದಿಗಳಿಂದ ಬಂದಿಲ್ಲೊಂದು ಉದ್ದಿಮೆಯಿಂದ ಅವರು ಲಾಭಗಳಿಸುತ್ತಾರೆ.

ವರ್ಗ ನಿಲುವು ಮುಖ್ಯ

ಇವೆಲ್ಲಾ ಸಂಗಾತಿಗಳನ್ನು ತಿಳಿಸಿರುವುದು ಒಂದು ಬಿಕ್ಕಟ್ಟಿನ ಅವಧಿಯಲ್ಲಿ ನಾವು ಯಾವುದೇ ಹೋರಾಟ ಆರಂಭಿಸುವುದು ಸಾಧ್ಯವಿಲ್ಲ. ಎಂಬ ತೀರ್ಮಾನಕ್ಕೆ ಬರಲು ಅಲ್ಲ. "ಮ್ಯಾನೇಜ್‌ಮೆಂಟ್"ಸದಾ ಸುಳ್ಳುಗಳನ್ನೇ ಹೇಳುತ್ತದೆ ಎಂಬ ಸರಳೀಕೃತವಾದ ವಾಸ್ತವಾಂಶಗಳನ್ನು ಮುಸುಕುಗೊಳಿಸುತ್ತದೆ.

[6ನೇ ಪುಟ ನೋಡಿ]

"ಬರಲಿದೆ ಭಾರತದ ಜನವಿಜ್ಞಾನ ಜಾಥಾ"

ಇಪ್ಪತ್ತಾರು ಜನಪರ ವಿಜ್ಞಾನ ಸಂಘಟನೆಗಳು ದೇಶದಾದ್ಯಂತ ಒಂದು ತಿಂಗಳ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ. ಇದಕ್ಕೆ ಭಾರತ ವಿಜ್ಞಾನ ಜಾಥಾ ಎಂದು ಹೆಸರಿಡಲಾಗಿದೆ. ಅಕ್ಟೋಬರ್ 2ಕ್ಕೆ ದೇಶದ ಐದು ಮೂಲೆಗಳಿಂದ ಆರಂಭವಾಗುವ ಈ ಜಾಥಾ ನವೆಂಬರ್7ರಂದು ಭೋಪಾಲದಲ್ಲಿ ಒಂದುಗೂಡಿ ರ್ಯಾಲಿಯಲ್ಲಿ ಕೊನೆಗೊಳ್ಳಲಿದೆ.ರ್ಯಾಲಿಯಲ್ಲಿ 1000ವಿಜ್ಞಾನಿಗಳು ಮತ್ತು 5000 ಶಿಕ್ಷಕರು ಭಾಗವಹಿಸಲಿದ್ದಾರೆ.

ವಿಜ್ಞಾನ-ತಂತ್ರಜ್ಞಾನ

ಉತ್ತರ,ಈಶಾನ್ಯ, ಪೂರ್ವ,ದಕ್ಷಿಣ, ಪಶ್ಚಿಮಗಳಿಂದ ಹೊರಡುವ 5 ಜಾಥಾಗಳು ಹೆಚ್ಚು ಕಡಿಮೆ ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಮೂಲಕ ಹಾದುಹೋಗಲಿವೆ. ಜಾಥಾ ಸುಮಾರು 500ಸ್ಥಳಗಳಲ್ಲಿ ನಿಲ್ಲಲಿದ್ದು, ಸುಮಾರು 25,000ಕಿ.ಮೀ. ಕ್ರಮಿಸಲಿದೆ. ಈ ಸ್ಥಳಗಳಲ್ಲಿ ಜಾಥಾ ಕಾರ್ಯಕ್ರಮಗಳಲ್ಲದೆ ಸುಮಾರು 1ತಿಂಗಳ ಮೊದಲೇ ಹಲವಾರು ಚಟುವಟಿಕೆಗಳನ್ನು ಯೋಜಿಸಲಾಗಿದೆ.

ಪ್ರತಿ ಜಾಥಾ 30ವಿಜ್ಞಾನಿಗಳು, ಕಲಾವಿದರು ಮತ್ತು ಜನಪರ ವಿಜ್ಞಾನ ಚಳುವಳಿಯ ಕಾರ್ಯಕರ್ತರನ್ನೊಳಗೊಂಡಿರುತ್ತದೆ. ಜಾಥಾ ಪ್ರತಿದಿನ 3 ಪ್ರದರ್ಶನಗಳನ್ನು ಕೊಡುತ್ತದೆ. ಬೀದಿನಾಟಕ, ಹಾಡುಗಳು, ಫಿಲ್ಮ್, ವಿಡಿಯೋ ಮತ್ತು ಸ್ಲೈಡ್-ಶೋ, ಜನಪ್ರಿಯ ಉಪನ್ಯಾಸಗಳು,ಮಾಡೆಲ್ ಮತ್ತು ಕಿಟ್‌ಗಳ ಪ್ರದರ್ಶನ ಇದರ ಅಂಗವಾಗಿರುತ್ತದೆ. ಜಾಥಾ ಪೂರ್ವ ಚಟುವಟಿಕೆಗಳಲ್ಲಿ ವಸ್ತು ಪ್ರದರ್ಶನ, ವಿಚಾರ ಸಂಕಿರಣ,ಸಮ್ಮೇಳನ, ಕ್ವಿಜ್ಹು ಮತ್ತು ಪ್ರಬಂಧ ಸ್ಪರ್ಧೆಗಳು ಸೇರುತ್ತವೆ. ಈ ಜಾಥಾ ಪೂರ್ವ ಚಟುವಟಿಕೆಗಳು ಈ ಸ್ಥಳಗಳಲ್ಲಿ ಜನಪರ ವಿಜ್ಞಾನ ಚಳುವಳಿಗಳನ್ನು ಹರಡುವ ಬಲಪಡಿಸುವ ದೃಷ್ಟಿಯಿಂದ ಮುಖ್ಯವಾದದ್ದು.

ಜನಪರ ಕಣ್ಣೋಟ

ಡೆಲ್ಲಿ ಸಾಯನ್ಸ್ ಫೋರಂ, ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಮುಂತಾದ ಸಂಘಟನೆಗಳು ಈ ಜಾಥಾವನ್ನು ಸಂಘಟಿಸಲಿದ್ದು, ಜಾಥಾದ ಎಲ್ಲಾ ಕಾರ್ಯಕ್ರಮಗಳಿಗೆ ಒಂದು ಸಾಮಾನ್ಯ ಜನಪರ ಕಣ್ಣೋಟವಿದೆ. ಜಾಥಾದ ಕಾರ್ಯಕ್ರಮಗಳು,ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಪೂರ್ಣ ಸಾಮರ್ಥ್ಯದ ಅರಿವು ಜನರಿಗೆ ಮಾಡಿಕೊಡಲಿದ್ದು, ಅವರನ್ನು, ವಿಜ್ಞಾನವನ್ನು ಜನಪರ ಮಾಡುವ ಚಳುವಳಿಯಲ್ಲಿ ತೊಡಗಿಸಲು ಪ್ರಯತ್ನಿಸುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನದ ದುರುಪಯೋಗಗಳ ವಿರುದ್ಧ, ಜನರು ಮಧ್ಯಪ್ರವೇಶ ಮಾಡುವಂತೆ ಜಾಥಾದ ಉದ್ದೇಶಗಳಲ್ಲೊಂದು. ಚಾರಿತ್ರಿಕವಾಗಿ ವಿಜ್ಞಾನದ ಸೃಷ್ಟಿಕರ್ತರಾದ ಜನತೆಯನ್ನು ಪುನಃ ವಿಜ್ಞಾನದ ಬಳಿ ತರುವುದೂ ಮುಖ್ಯ.

ಈ ಕಣ್ಣೋಟದೊಂದಿಗೆ ಪ್ರದರ್ಶನ ಮಾಧ್ಯಮಗಳಲ್ಲಿ ತಯಾರಿಸುವ ಕಾರ್ಯಕ್ರಮಗಳು ಹಲವಾರು ಮುಖ್ಯ ವಿಷಯಗಳ ಸುತ್ತ ಹೆಣೆಯಲಾಗುತ್ತದೆ. ಪರಿಸರ ಮತ್ತು ಮಾಲಿನ್ಯ, ನೀರು, ಆರೋಗ್ಯ ಮತ್ತು ಔಷಧಿ, ಸ್ವಾವಲಂಬನೆ ಇತ್ಯಾದಿ ಅಂತಹ ವಿಷಯಗಳು. ಈ ಕಾರ್ಯಕ್ರಮಗಳನ್ನು ತಯಾರಿಸಲು ಭರದಿಂದ ಸಿದ್ಧತೆ ನಡೆದಿದೆ.

ಜಾಥಾ ಮತ್ತಿತರ ಕಾರ್ಯಕ್ರಮಗಳು ವಿದ್ಯಾರ್ಥಿಗಳು, ಶಿಕ್ಷಕರು, ಕಾರ್ಮಿಕರು, ಜನಪರ ವಿಜ್ಞಾನ ಚಳುವಳಿಯ ಕಾರ್ಯಕರ್ತರು, ಮಹಿಳೆಯರನ್ನು ಉದ್ದೇಶಿಸುತ್ತವೆ. ಆದ್ದರಿಂದ ಜಾಥಾ ನಿಲ್ಲುವ ಸ್ಥಳಗಳೂ ಶಾಲಾ ಕಾಲೇಜುಗಳು, ಸಾರ್ವಜನಿಕ ಕ್ಷೇತ್ರದ ಉದ್ಯಮಗಳು ಇತ್ಯಾದಿ ಸ್ಥಳಗಳಾಗಿರುತ್ತವೆ. ಸುಮಾರು 50 ಲಕ್ಷ ಜನರನ್ನು ನೇರವಾಗಿ ಮುಟ್ಟಬಹುದು ಎಂದು ಅಂದಾಜು ಮಾಡಲಾಗಿದೆ.

ಈ ಜನಪರ ವಿಜ್ಞಾನ ಚಳುವಳಿ ಪ್ರಜಾಸತ್ತಾತ್ಮಕ ಚಳುವಳಿಯ ಅಂಗ. ಜಾಥಾದ ಕಾರ್ಯಕ್ರಮಗಳಿಗೆ ಸಾಧ್ಯವಾದ ಸಹಕಾರವನ್ನು ನೀಡಿ ಈ ಜನಪರ ಕಾರ್ಯಕ್ರಮವನ್ನು ಯಶಸ್ವಿಗೆ, ಕಾರ್ಮಿಕರ, ರೈತರ, ವಿದ್ಯಾರ್ಥಿ ಯುವ ಜನರ ಸಹಾಯ ಸಹಕಾರ ಅಗತ್ಯ.

– ಶರತ್ ಚಂದ್ರ

ಸೆಪ್ಟೆಂಬರ್ ಕಾರ್ಯಕ್ರಮಕ್ಕೆ

ರೈತ ಸಂಘದ ಬಿರುಸಿನ ಸಿದ್ಧತೆ

ಸೆಪ್ಟೆಂಬರ್ 7ರಿಂದ 13 ರವರೆಗೆ ಅಖಿಲ ಭಾರತ ಬೇಡಿಕೆ ಸಪ್ತಾಹವನ್ನು ಆಚರಿಸಬೇಕೆಂದೂ ಅದರ ಅಂಗವಾಗಿ ಜೈಲ್‌ಭರೋ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದೂ ಆಲ್ ಇಂಡಿಯಾ ಕಿಸಾನ್‌ಸಭಾ ಕರೆ ನೀಡಿದೆ. ಇದನ್ನು ಯಶಸ್ವಿಗೊಳಿಸಲು ದೇಶಾದ್ಯಂತ ಬಿರುಸಿನ ಸಿದ್ಧತೆಗಳು ನಡೆಯತೊಡಗಿವೆ. ಕರ್ನಾಟಕ ಪ್ರಾಂತ ರೈತ ಸಂಘವೂ ಸಹ ರಾಷ್ಟ್ರವ್ಯಾಪಿ ಹೋರಾಟದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಸಕಲ ಸಿದ್ಧತೆಗಳನ್ನೂ ನಡೆಸುತ್ತಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಈಗಾಗಲೇ ಸಿದ್ಧತಾ ಸಭೆಗಳು ನಡೆದಿರುವ ಬಗ್ಗೆ ವರದಿಗಳು ಬರುತ್ತಿವೆ. ನಮಗೆ ತಲುಪಿರುವ ವರದಿಗಳನ್ನು ಕೆಳಗೆ ಪ್ರಕಟಿಸಲಾಗಿದೆ.

ಮಂಗಳೂರು

ಮಂಗಳೂರು ತಾಲ್ಲೂಕು ರೈತ ಸಂಘದ ಸಭೆ ಜುಲೈ13ರಂದು ಕಾ|| ಪಾವೂರು ಬಾಬು, ಅಧ್ಯಕ್ಷತೆಯಲ್ಲಿ ನಡೆದು ಸೆಪ್ಟೆಂಬರ್11ರಂದು ಮಂಗಳೂರು ಜಿಲ್ಲಾಧಿಕಾರಿ ಕಛೇರಿಯೆದುರು ಪಿಕೆಟಿಂಗ್ ನಡೆಸಲು ತೀರ್ಮಾನಿಸಿತು. ಕಾರ್ಯಕ್ರಮಕ್ಕೆ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಸಾವಿರಾರು ಸ್ವಯಂಸೇವಕರನ್ನು ಸಂಘಟಿಸಿ ಪಾಲ್ಗೊಳ್ಳುವಂತೆ ಮಾಡುವ, ಗ್ರಾಮಗಳಲ್ಲಿ ಪ್ರಚಾರ ಸಭೆಗಳನ್ನು ನಡೆಸುವ, ತೀರ್ಮಾನಗಳನ್ನು ಸಭೆ ಕೈಗೊಂಡಿತು. ದ.ಕನ್ನಡ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ|| ಅಬ್ರಹಾಂ ಕರ್ಕಡ ಮತ್ತು ಉಪಾಧ್ಯಕ್ಷ ಕಾ| ಬಿ ವಿಷ್ಣುಮೂರ್ತಿ ಸಭೆಯಲ್ಲಿ ಹಾಜರಿದ್ದು ಮಾರ್ಗದರ್ಶನ ನೀಡಿದರು.

ಕೋಲಾರ

ಕೋಲಾರ ಜಿಲ್ಲಾ ರೈತ ಸಂಘದ ಸಮಾವೇಶ ಜುಲೈ19ರಂದು ನಡೆದು ಕಿಸಾನ್‌ಸಭಾದ ಸೆಪ್ಟೆಂಬರ್ ಕಾರ್ಯಕ್ರಮದ ಅಂಗವಾಗಿ 5000 ಜನರನ್ನು ಜೈಲು ತುಂಬುವ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡುವ ತೀರ್ಮಾನವನ್ನು ಕೈಗೊಂಡಿದೆ. ಕಿಸಾನ್‌ಸಭಾದ ತೀರ್ಮಾನದ ಪ್ರಕಾರ ರೈತರ 12ಅಂಶಗಳ ಬೇಡಿಕೆಗಳ ಆಧಾರದ ಮೇಲೆ 5000 ರೈತ ಸಂಘದ ಕಾರ್ಯಕರ್ತರನ್ನು ಜಿಲ್ಲೆಯ ವಿವಿಧ ಭಾಗಗಳಿಂದ ಕಾರ್ಯಕ್ರಮಕ್ಕೆ ಕರೆತರುವುದಾಗಿ ಸಮಾವೇಶದಲ್ಲಿ ಘೋಷಿಸಲಾಗಿದೆ. ಸಮಾವೇಶದಲ್ಲಿ 300 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾ|| ಜಿ. ವಿ. ಶ್ರೀರಾಮ ರೆಡ್ಡಿ, ಕಾ|| ಆರ್. ವೆಂಕಟರಾಮಯ್ಯ, ಕಾ|| ಜಿ. ವಿ. ಅಶ್ವಥನಾರಾಯಣ ರೆಡ್ಡಿ ಮುಂತಾದವರು ಸಮಾವೇಶದಲ್ಲಿ ಮಾತನಾಡಿದರು.

ಬೆಂಗಳೂರು

ರೈತ ಸಂಘದ ಉತ್ತರ ಹಳ್ಳಿ ಹೋಬಳಿ ಕಾರ್ಯಕರ್ತರ ಸಭೆ ಜುಲೈ 19ರಂದು ಕಾ| ಶಾಮಣ್ಣ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆಯಿತು. ಕಿಸಾನ್‌ಸಭಾದ ಸೆಪ್ಟೆಂಬರ್ ಕಾರ್ಯಕ್ರಮದ ಬಗ್ಗೆ ಸಭೆಯು ಚರ್ಚಿಸಿ ಗೋಡೆ ಬರಹ, ಸೈಕಲ್ ಜಾಥಾ ಕಾರ್ಯಕ್ರಮಗಳ ಮೂಲಕ ಮತ್ತು ಗ್ರಾಮ ಮಟ್ಟದಲ್ಲಿ ಸಿದ್ಧತಾ ಸಭೆಗಳನ್ನು ನಡೆಸುವ ಮೂಲಕ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಚಾರ ನಡೆಸಬೇಕೆಂದು ಸಭೆ ತೀರ್ಮಾನಿಸಿದೆ. ಕಾರ್ಯಕ್ರಮದ ಸಿದ್ಧತೆಗಾಗಿ ನಡೆಯಲಿರುವ ಜಿಲ್ಲಾ ಸಮಾವೇಶಕ್ಕೆ 200 ಪ್ರತಿನಿಧಿಗಳನ್ನು ಕಳಿಸಲು ತೀರ್ಮಾನಿಸಲಾಗಿದೆ.

ದೊಡ್ಡಬಳ್ಳಾಪುರ

ರೈತ ಸಂಘದ ದೊಡ್ಡಬಳ್ಳಾಪುರ ತಾಲ್ಲೂಕು ಸಮಿತಿಯ ವಿಸ್ತೃತ ಸಭೆ ಕಾ|| ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ರೈತ ಸಂಘದ ಜಿಲ್ಲಾ ಸಹಕಾರ್ಯದರ್ಶಿ ಕಾ| ಲಕ್ಕಣ್ಣ, ಸೆಪ್ಟೆಂಬರ್ ಹೋರಾಟದ ಬಗ್ಗೆ ವಿವರಿಸಿದರು. ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ನಡೆಸಬೇಕಾದ ಸಿದ್ಧತೆಗಳ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು ಗ್ರಾಮವಾರು ಸಭೆಗಳನ್ನು ನಡೆಸಿ ಪ್ರಚಾರ ನಡೆಸಲು ತೀರ್ಮಾನಿಸಲಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕು ಕಾರೇಪುರ ಗ್ರಾಮದಲ್ಲಿ ರೈತ ಸಂಘದ ಸಭೆ ನಡೆದು ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಹೋರಾಟದ ಬಗ್ಗೆ ಚರ್ಚಿಸಲಾಯಿತು. ಜೈಲ್‌ಭರೋ ಕಾರ್ಯಕ್ರಮಕ್ಕೆ ಕಾರೇಪುರ ಗ್ರಾಮದಿಂದ 70 ಜನರನ್ನು ಕಳುಹಿಸಲು ಸಭೆ ತೀರ್ಮಾನಿಸಿತು ○

ಮುಖ್ಯಮಂತ್ರಿ ಜೊತೆ

ಮಲಪ್ರಭಾ ರೈತರ ಮಾತುಕತೆ

ಕರ್ನಾಟಕ ರಾಜ್ಯದ ರೈತ ಚಳುವಳಿಯಲ್ಲಿಯೇ ಚಾರಿತ್ರಿಕ ಇತಿಹಾಸ ನಿರ್ಮಿಸಿದ ನರಗುಂದ–ನವಲಗುಂದ ರೈತ ಬಂಡಾಯಕ್ಕೆ ನಾಂದಿಯಾದ ಮಲಪ್ರಭಾ ನೀರಾವರಿ ಪ್ರದೇಶ ರೈತ ಸಮನ್ವಯ ಸಮಿತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಸಭೆ ಜೂನ್22ರಂದು ಸೇರಿತು. 1980ರಲ್ಲಿ ಗುಂಡು ರಾವ್ ಸರಕಾರದ ವಿರುದ್ಧ ಯಾವ ಬೇಡಿಕೆಗಾಗಿ ಅಂದು ಹೋರಾಟ ನಡೆಸಿದರೋ ಅದೇ ಬೇಡಿಕೆಗಾಗಿ 7ವರ್ಷಗಳ ನಂತರ ಮತ್ತೆ ಹೋರಾಟ ಮಾಡಬೇಕಾಗಿ ಬಂದಿರುವುದು ಶೋಚನೀಯ ಸಂಗತಿ. ಇಂದಿನ ಜನತಾ ಸರಕಾರ ಅನ್ಯಾಯವಾಗಿ ರೈತರಿಂದ ವಸೂಲಿ ಮಾಡುತ್ತಿರುವ ಕರ ಭಾರದ ವಿರುದ್ಧ ಮತ್ತೊಮ್ಮೆ ಹೋರಾಟಕ್ಕೆ ಅಣಿಗೊಳ್ಳುತ್ತಿದ್ದಾರೆ. ಅಚ್ಚುಕಟ್ಟು ಪ್ರದೇಶದ ರೈತರು ಕರಭಾರ ತುಂಬಬಾರದೆಂದು, ಹಾಗೂ ಸರಕಾರಕ್ಕೆ ನಿಯೋಗ ತೆರಳಿ ಈ ಕುರಿತು ಮಾತುಕತೆ ನಡೆಸಲು ನಿರ್ಧರಿಸಿತು. ಜುಲೈ16ರಂದು ಎಸ್.ಎಚ್. ಕಪ್ಪಣ್ಣವರ, ಎಸ್.ಎಂ. ಬಾಳಿಕಾಯಿ,ಶಿವದೇವಗೌಡ ಪಾಟೀಲ, ಗಾಣಿಗೇರ ಹಾಗೂ ಬಿ. ಆರ್. ಯಾವಗಲ್ ನೇತೃತ್ವದ ನಿಯೋಗ ಕಂದಾಯ ಸಚಿವ ಎಸ್. ಆರ್. ಬೊಮ್ಮಾಯಿ ಹಾಗೂ ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರನ್ನು ಭೇಟಿಯಾಗಿ ಮಾತುಕತೆ ನಡೆಸಿತು. ಹೊಲಕ್ಕೆ ನೀರು ಬಂದ ನಂತರದ 5ವರ್ಷಗಳವರೆಗೆ ನೀರಿನ ಕಂದಾಯವನ್ನು ಸೂಟ ಬಿಟ್ಟಿರುವುದಾಗಿ ಮುಖ್ಯಮಂತ್ರಿಗಳು ತಿಳಿಸಿ ಯಾವಗಲ್ ಹಾಗೂ ಸಂಕ್ರಿಕೊಪ್ಪ, ಬೊಮ್ಮಾಯಿಯವರೊಡನೆ ಕೂಲಂಕುಷವಾಗಿ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು.

ರೈತರ ಪ್ರಮುಖ ಬೇಡಿಕೆಗಳು

1. ಹೊಲಗಾಲುವೆಗಳನ್ನು ಪೂರ್ಣಗೊಳಿಸಿದ ದಿನಾಂಕಗಳನ್ನು ಪ್ರಕಟಗೊಳಿಸಬೇಕು.
2. ಹೊಲಗಾಲುವೆಗಳನ್ನು ಪೂರ್ಣಗೊಳಿಸಿ ನೀರು ಕೊಟ್ಟ 5ವರ್ಷ ನೀರಿನ ಕರ ಮನ್ನಾ ಮಾಡಬೇಕು.
3. ಬೆಳೆಗೆ ಸಾಕಾಗುವಷ್ಟು ನೀರು ಪೂರೈಕೆಯಾಗದೆ ಬೆಳೆ ನಷ್ಟವಾದಲ್ಲಿ ಆ ವರ್ಷದ ನೀರಿನ ಕರ ಸೂಟ ಬಿಡಬೇಕು.
4. ತುದಿಗಾಲುವೆಗಳಲ್ಲಿ ಹೊಲಗಳಿಗೆ ನೀರು ಬಾರದಿದ್ದಲ್ಲಿ ನೀರು ಕೊಟ್ಟ ಬಗ್ಗೆ ಅಧಿಕೃತ ದಾಖಲೆಗಳು ಇರದಿದ್ದಲ್ಲಿ ಕರದ ಆಕರಣೆ ಮಾಡಬಾರದು.
5. ಯಾವುದೇ ಬೆಳೆ ಬೆಳೆದರೂ ದಂಡ ಹಾಕಬಾರದು.
6. ಮಲಪ್ರಭಾ ನೀರಾವರಿಯು ಅನಿಶ್ಚಿತ ಸ್ವರೂಪದ ನೀರಾವರಿಯಾಗಿದ್ದರಿಂದ ನಿಶ್ಚಿತ ಸ್ವರೂಪ ನೀರಾವರಿ ನೀರಿನ ಕರಕ್ಕೂ ನಮ್ಮ ನೀರಾವರಿ ಕರಕ್ಕೂ ವ್ಯತ್ಯಾಸ ಇರಬೇಕು.

ಈ ಮೇಲ್ಕಂಡ ಬೇಡಿಕೆಗಳನ್ನು ಸರ್ಕಾರ ಪರಿಗಣಿಸಿ ಬಗ್ಗೆಹರಿಸದಿದ್ದಲ್ಲಿ ಮುಂದಿನ ಹೋರಾಟಕ್ಕೆ ರೈತರು ಸಿದ್ಧರಾಗಬೇಕೆಂದು ರೈತ ಮುಖಂಡರು ಕರೆ ನೀಡಿದ್ದಾರೆ. ●

ದೇಶಾದ್ಯಂತ ಸಾರಿಗೆ ಕೆಲಸಗಾರರಿಂದ ಬೇಡಿಕೆ ಸಪ್ತಾಹ

ಅಖಿಲ ಭಾರತ ರಸ್ತೆ ಸಾರಿಗೆ ಕೆಲಸಗಾರರ ಒಕ್ಕೂಟವು (ಸಿ.ಐ.ಟಿ.ಯು.) ಜುಲೈ25ರಿಂದ 31ರ ತನಕ ದೇಶದಾದ್ಯಂತ ಬೇಡಿಕೆ ವಾರಾಚರಣೆ ಮತ್ತು ಜುಲೈ31ರಂದು ಬೇಡಿಕೆ ದಿನಾಚರಣೆಯನ್ನು ಆಚರಿಸಲು ರಸ್ತೆಸಾರಿಗೆ ನೌಕರರಿಗೆ ಕರೆ ನೀಡಿದೆ ಎಂದು ಒಕ್ಕೂಟದ ಕೇಂದ್ರ ಸಮಿತಿ ಸದಸ್ಯರಲ್ಲೊಬ್ಬರಾದ ಶ್ರೀ ಕೆ. ಮೂಸಬ್ಬ ತಿಳಿಸಿದ್ದಾರೆ. ಈ ಬೇಡಿಕೆ ಸಪ್ತಾಹದಲ್ಲಿ ಬಸ್ ನೌಕರರು, ಲಾರಿ ನೌಕರರು, ಆಟೋರಿಕ್ಷಾ ಚಾಲಕರು ಮತ್ತು ಟೂರಿಸ್ಟ್‌ಕಾರು ಮತ್ತು ವ್ಯಾನ್‌ಚಾಲಕರು ಭಾಗವಹಿಸಲಿದ್ದಾರೆಂದು ಅವರು ತಿಳಿಸಿದ್ದಾರೆ.

ಸಾರಿಗೆ ನೌಕರರಿಗೆ ಜೀವನಾವಶ್ಯಕವಾದ ಕನಿಷ್ಠವೇತನ, ಕೆಲಸದ ಭದ್ರತೆ, 1939ರಲ್ಲಿ ರೂಪಿತವಾದ ಮೋಟಾರ್ ವಾಹನ ಕಾಯಿದೆಗೆ ಸೂಕ್ತ ತಿದ್ದುಪಡಿ, ಮೋಟಾರ್‌ವರ್ಕರ್ಸ್ ಕಾಯಿದೆಗೆ ಹಾಗೂ ಕೈಗಾರಿಕಾ ವಿವಾದ ಕಾಯಿದೆಗೆ ತಿದ್ದುಪಡಿ, ಆಟೋರಿಕ್ಷಾ ಚಾಲಕರಿಗೆ ಮೋಟಾರ್ ವೆಹಿಕಲ್ ಕಾಯಿದೆಯಿಂದಾಗುವ ಅನ್ಯಾಯಗಳನ್ನು ಸರಿಪಡಿಸುವಿಕೆ, ಪೋಲೀಸ್ ಹಾಗೂ ಸಾರಿಗೆ ಅಧಿಕಾರಿಗಳ ಕಿರುಕುಳದ ವಿರುದ್ಧ ರಕ್ಷಣೆ, ಆರ್.ಟಿ.ಎ. ಸಭೆಗಳಲ್ಲಿ ನೌಕರರ ಪ್ರತಿನಿಧಿಗಳಾಗಿ ಭಾಗವಹಿಸಲು ಅಧಿಕಾರ ಮೊದಲಾದ ಬೇಡಿಕೆಗಳ ಬಗ್ಗೆ, ಹೋರಾಟದ ಮೊದಲ ಅಂಗವಾಗಿ ಈ ಕಾರ್ಯಕ್ರಮ ನಡೆಯಲಿದೆ. ಸಾರಿಗೆ ಕೆಲಸಗಾರರಿಗೆ ಸಂಬಂಧಪಟ್ಟ ರಾಷ್ಟ್ರೀಯ ಮಟ್ಟದಲ್ಲಿ ಈ ರೀತಿಯ ಕಾರ್ಯಕ್ರಮ ನಡೆಯುವುದು ಇದು ಪ್ರಥಮ ಬಾರಿ. ಈ ಸಂದರ್ಭದಲ್ಲಿ ದೇಶದಾದ್ಯಂತ ಸಭೆ, ಮೆರವಣಿಗೆ, ಮನವಿ ಅರ್ಪಿಸುವ ಕಾರ್ಯಕ್ರಮಗಳನ್ನು ನಡೆಸಲಾಗುವುದು.

ಈ ಬೇಡಿಕೆ ವಾರಾಚರಣೆಯನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲೆಯ ಬಸ್ ನೌಕರರಿಗೂ, ಆಟೋರಿಕ್ಷಾ ಮತ್ತು ಟೂರಿಸ್ಟ್ ವಾಹನ ಚಾಲಕ-ಮಾಲಕರಿಗೂ ಶ್ರೀ ಕೆ. ಮೂಸಬ್ಬ ಕರೆ ನೀಡಿದ್ದಾರೆ. ○

ಕೇಂದ್ರ ಸರಕಾರದಿಂದ ಮೋಸ

ಸಿಮೆಂಟ್ ಕೈಗಾರಿಕೆಯಲ್ಲಿ ಐ.ಎನ್.ಟಿ.ಯು.ಸಿಗೆ ಬಹುಮತವಿಲ್ಲದ ಕಾರಣ ಅದರ ಅಧ್ಯಕ್ಷ ರಾಮಾನುಜಂ ಮತ್ತು ಸಿಮೆಂಟ್ ಉತ್ಪಾದಕರ ಸಂಘದ ಕಪೂರ ಅವರ ಪಂಚಾಯತಿ ನೇಮಿಸಿ ಸಿಮೆಂಟ್ ಕಾರ್ಮಿಕರ ಬೇಡಿಕೆಗಳ ಕುರಿತು ನಿರ್ಣಯ ತೆಗೆದುಕೊಳ್ಳುವುದು ಸರಿಯಲ್ಲ. ಇತರ ಸಂಘಟನೆಗಳನ್ನೊಳಗೊಂಡ ಪಂಚಾಯತಿ ನೇಮಿಸಬೇಕೆಂದು ಕರ್ನಾಟಕ ಹೈಕೋರ್ಟು ಮತ್ತು ಸುಪ್ರಿಂಕೋರ್ಟು ಕೇಂದ್ರ ಸರಕಾರಕ್ಕೆ ಆದೇಶ ನೀಡಿದರೂ ಕೂಡ, ಆ ಆದೇಶದಂತೆ ಸಿ.ಐ.ಟಿ.ಯು.ವನ್ನೊಳಗೊಂಡು ಎಲ್ಲಾ ಕಾರ್ಮಿಕ ಕೇಂದ್ರಗಳೊಡನೆ ಮೂರುಸುತ್ತು ಚರ್ಚೆ ನಡೆಸಿದ ನಂತರವೂ ಕೇಂದ್ರ ಸರಕಾರ ಕೋರ್ಟ್‌ನ ಆದೇಶವನ್ನು ಕಡೆಗಣಿಸಿ ಕೇಂದ್ರ ಸರಕಾರ ರಾಮಾನುಜಂ ಮತ್ತು ಕಪೂರ ಅವರ ಪಂಚಾಯತಿ ನೇಮಿಸಿದ ಪ್ರಕಟಣೆ ಹೊರಡಿಸಿರುವುದನ್ನು ಬಾಗಲಕೋಟೆ ಸಿಮೆಂಟ್ ಕೆಲಸಗಾರ ಸಂಘದ ಪರವಾಗಿ ಕಾಂ.ಎನ್ಕೆ ಬಲವಾಗಿ ಖಂಡಿಸಿದ್ದಾರೆ. ಹಿಂದೆ ಕೂಡ ಐ.ಎನ್.ಟಿ.ಯು.ಸಿ. ಮುಖಂಡತ್ವ ಉತ್ಪಾದಕರ ಜೊತೆ ಸೇರಿ ಕೆಲಸಗಾರಿಗೆ ಅನ್ಯಾಯ ಬಗೆದಿತ್ತು. ಈಗ ಮತ್ತೆ ಕೆಲವು ಬೇಡಿಕೆಗಳನ್ನು ಕೈಬಿಡುವ ಸಂಭವವಿರುವುದರಿಂದ ಕೇಂದ್ರ ಸರಕಾರದ ಪ್ರಕಟಣೆಯನ್ನು ವಿರೋಧಿಸಬೇಕೆಂದು ಕರೆ ನೀಡಿದ್ದಾರೆ. ○

ಪ್ರೆಸ್ ಕಾರ್ಮಿಕನ ವಜಾ

ಉಡುಪಿಯ ನ್ಯಾಶನಲ್‌ಪ್ರಿಂಟರ್ಸ್ ಮಾಲೀಕರು ಅದೇ ಪ್ರೆಸ್ಸಿನಲ್ಲಿ ಕೆಲಸ ಮಾಡುತ್ತಿರುವ ಜಯಾನಂದ ಶೇರಿಗಾರನ ಮೇಲೆ ಸುಳ್ಳು ಆರೋಪಗಳನ್ನು ಹೋರಿಸಿ,ವಿಚಾರಣೆ ನಡೆಸದೆ ತಾ.15.7.87ರಿಂದ ಕೆಲಸದಿಂದ ವಜಾ ಮಾಡಿದ್ದರು. ತಾ. 18.7.87ರಂದು ಕಾರ್ಮಿಕ ಅಧಿಕಾರಿಗಳು ಮಾತುಕತೆಗೆ ಕರೆದಾಗ ಮಾಲೀಕರು ಹಾಜರಾಗಲಿಲ್ಲ.

ಮಾಲೀಕರ ಈ ಧೋರಣೆಯನ್ನು ಪ್ರತಿಭಟಿಸಿ ಉಡುಪಿ ಎಲ್ಲಾ ಪ್ರೆಸ್ಸಿನ ನೌಕರರು ತಾ. 21-7-87ರಂದು ಮಧ್ಯಾಹ್ನ 12-30 ರಿಂದ 1-00 ಗಂಟೆಯವರೆಗೆ ನ್ಯಾಶನಲ್ ಪ್ರಿಂಟರ್ಸ್‌ನ ಎದುರು ಮತ ಪ್ರದರ್ಶನ ನಡೆಸಿದರು. ಕೊನೆಯಲ್ಲಿ ಸಂಘಟನಾ ಸಮಿತಿಯ ಸಂಚಾಲಕ ಕಾ|| ರಮೇಶ ಮೆಂಡನ್ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದರು. ○

ಆಗಸ್ಟ್ 3 - ತೋಟ ಕಾರ್ಮಿಕರ ಮುಷ್ಕರ

ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರೀ ಸಮಿತಿ ಸಭೆ ಜುಲೈ 10 ರಂದು ಕಾ.ಸಿ. ನಂಜುಂಡಪ್ಪ ನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಲ್ ಇಂಡಿಯಾ ಪ್ಲಾಂಟೇಷನ್ ವರ್ಕರ್ಸ್ ಫೆಡರೇಶನ್ನಿನ ಸಭೆಯು ಆಗಸ್ಟ್ 3 ರಂದು ಅಖಿಲ ಭಾರತ ಬೇಡಿಕೆ ದಿನಾಚರಣೆ ನಡೆಸಬೇಕೆಂದು ನೀಡಿರುವ ಕರೆಯ ಮೇರೆಗೆ ತೋಟ ಕಾರ್ಮಿಕರು ಒಂದು ದಿನದ ಮುಷ್ಕರ ನಡೆಸಬೇಕೆಂದು ಸಭೆ ಕರೆ ನೀಡಿದೆ. ಅಲ್ಲದೆ ಅದೇ ದಿನ ಎನ್.ಸಿ.ಸಿ.ಯ ಕರೆಯಂತೆ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿ ಭಟಿಸಿ ಚಿಕ್ಕಮಗಳೂರು ಮತ್ತು ಮೂಡಿಗೆರೆಗಳಲ್ಲಿ ಪ್ರದರ್ಶನ ನಡೆಸಲು ಸಭೆ ತೀರ್ಮಾನಿಸಿದೆ. ಕರ್ನಾಟಕದ ತೋಟ ಕಾರ್ಮಿಕರ ಸಂಬಳವನ್ನು ಕೇರಳ ಮತ್ತು ತಮಿಳು ನಾಡುಗಳ ತೋಟ ಕಾರ್ಮಿಕರ ಸಂಬಳದ ಮಟ್ಟಕ್ಕೆ ಏರಿಸುವ ಹೋರಾಟದಲ್ಲಿ ಸಿ.ಐ.ಟಿ.ಯು. ಸಂಘಟನೆಯಡಿಯಲ್ಲಿ ಕರ್ನಾಟಕದ ತೋಟ ಕಾರ್ಮಿಕರು ಸಂಘಟಿತರಾಗಬೇಕೆಂದು ಸಭೆಯು ಕರೆ ನೀಡಿದೆ. ●

"ಭೂಮಿ" ಪ್ರಶ್ನೆಯ ಮೂರು ತುರ್ತು ಸಮಸ್ಯೆಗಳು

ಜಿ. ಎನ್. ನಾಗರಾಜ್

ಭೂಮಿ, ಬೆಲೆ, ಕೂಲಿ ಇವುಗಳ ಜೊತೆಗೆ ಸರಕಾರವಿಧಿಸುವ ನೂರೆಂಟು ತೆರಿಗೆ ಕರಗಳು ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ನಿರ್ಧರಿಸುವ ಜೀವನಾಡಿಗಳು. ಗ್ರಾಮೀಣ ಪ್ರದೇಶದ ಶ್ರೀಮಂತರಿಂದ ಗ್ರಾಮೀಣ ಪ್ರದೇಶದ ದುಡಿಯುವ ಜನರ ಶೋಷಣೆಯನ್ನು, ಬಂಡವಾಳಶಾಹಿಗಳು ನಗರಗಳ ಕಾರ್ಮಿಕವರ್ಗದ ರಕ್ತವನ್ನು ಮಾತ್ರವಲ್ಲ ಇಡೀ ದೇಶದ ಎಲ್ಲಾ ದುಡಿಯುವ ಜನರ ರಕ್ತವನ್ನು ಹೀರಲು ಸಾಧ್ಯ ಮಾಡುವ ಹೀರುಗೊಳವೆಗಳು ಗ್ರಾಮೀಣ ಪ್ರದೇಶದ ದೈತಾಪಿಜನರ, ಕೃಷಿ ಕೂಲಿಕಾರರ ಜೀವನವನ್ನು ಈ ರಕ್ತ ಪಿಪಾಸು ನರ ಭಕ್ಷಕರಿಂದ ರಕ್ಷಿಸಬೇಕಾದರೆ ಈನಾಲ್ಕು ರೈತಾಪಿಜನರಿಗೆ, ಕೂಲಿಕಾರರಿಗೆ ಅನುಕೂಲವಾಗಬೇಕು.

ಅದಕ್ಕಾಗಿಯೇ ಅಖಿಲಭಾರತ ಕಿಸಾನ್ ಸಭಾ ಅನೇಕ ವರ್ಷಗಳ ನಂತರ ಹಮ್ಮಿಕೊಳ್ಳುತ್ತಿರುವ ತನ್ನ ಅಖಿಲಭಾರತ ಹೋರಾಟಸಪ್ತಾಹದಲ್ಲಿ ಈ ನಾಲ್ಕು ಬೇಡಿಕೆಗಳನ್ನು ತನ್ನ ಬೇಡಿಕೆಗಳ ಕೇಂದ್ರ ಬಿಂದುವಾಗಿಸಿಕೊಂಡಿದೆ. ದೇಶದಲ್ಲೆಡೆಯಲ್ಲಿ ಈ ಬೇಡಿಕೆಗಳು ರೈತರ, ಕೃಷಿ ಕಾರ್ಮಿಕರ ಹೃದಯದಿಂದ ಒಕ್ಕೊರಲ ದನಿಯಾಗಿ ಹೊರಬರ ಬೇಕಾಗಿದೆ. ದೇಶಾದ್ಯಂತ ಅನುರಣನಗೊಳ್ಳ ಬೇಕಾಗಿದೆ. ಭೂಮಿ, ಬೆಲೆ, ಕೂಲಿಗಾಗಿ ಕರಭಾರ ಹೇರಿಕೆ ವಿರುದ್ಧ ಮತ್ತೆ ಮತ್ತೆ ಪ್ರತಿಭಟನೆಯ ಅಲೆ ಎದ್ದು ಆಳುವವರನ್ನು ದೊಡ್ಡ ದೊಡ್ಡ ಜಮೀನುದಾರ ಬಂಡವಾಳಶಾಹಿಗಳನ್ನು ಅಲುಗಿಸಬೇಕಾಗಿದೆ. ಇನ್ನೂ ಈ ಪ್ರಶ್ನೆಗಳನ್ನು ಒಂದೊಂದಾಗಿ ಪರಿಶೀಲಿಸೋಣ.

ಭೂಮಿ

ಭೂಮಿಯ ಪ್ರಶ್ನೆ ಕರ್ನಾಟಕದಲ್ಲಿ ಅತ್ಯಂತ ತೀವ್ರ ರೂಪ ತಾಳುವುದು ಮೂರು ರೂಪದಲ್ಲಿ.

1 ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ರೈತರಿಗೆ ಆ ಭೂಮಿಯ ಮಾಲೀಕತ್ವ ದೊರೆಯಬೇಕು.

2 ಹೆಚ್ಚುವರಿ ಭೂಮಿಯನ್ನು ಭೂಸುಧಾರಣಾ ಕಾನೂನನ್ನು ವಂಚಿಸಿದ ಭೂಮಾಲೀಕರಿಂದ ವಶಪಡಿಸಿಕೊಂಡು ಹಂಚಬೇಕು.

3 ಭೂಸುಧಾರಣಾ ಕಾನೂನಿಗನುಗುಣವಾಗಿ ಭೂಮಿ ಪಡೆದ ಗೇಣಿ ರೈತರ ಸಂಕಷ್ಟಗಳ ನಿವಾರಣೆಯಾಗಬೇಕು.

ಪ. ಬಂಗಾಳದ ಭೂಸುಧಾರಣೆ ಹಾಗೂ ಗ್ರಾಮೀಣ ಅಭಿವೃದ್ಧಿ ಸಚಿವ ಬಿನೊಯ್ ಚೌಧುರಿಯವರು ಹೇಳಿದಂತೆ ಕರ್ನಾಟಕದಲ್ಲಿ ಈಗ ಕೂಡ ಬಹಳಷ್ಟು ಕೃಷಿ ಭೂಮಿ ಸರ್ಕಾರಿ ಒಡೆತನದಲ್ಲಿದೆ. ಪ ಬಂಗಾಳದಲ್ಲಿ ಸರ್ಕಾರಿ ಭೂಮಿಯೆಂಬುದು ಬಹಳ ಕಡಿಮೆ–ಕಾಡಿರುವ ಅರಣ್ಯ ಭೂಮಿ ಮತ್ತಿತರ ಕೆಲವು ಮಾತ್ರ ಉಳಿದೆಲ್ಲವೂ ಖಾಸಗಿ ಒಡೆತನದಲ್ಲಿಯೇ ಇದೆ ಎಂದರು.

ಅದರಂತೆಯೇ ಕರ್ನಾಟಕದಲ್ಲಿ ಅತ್ಯಂತ ತೀವ್ರ ಭೂ ಸಮಸ್ಯೆಯೆಂದರೆ ಸರ್ಕಾರಿ ಭೂಮಿಯ ಹಂಚಿಕೆ.ಕೃಷಿಯ ಬಿಕ್ಕಟ್ಟು ತೀವ್ರವಾದಂತೆ,ಫಸಲಿನ ಬೆಲೆಗಳುಕುಸಿದು ರೈತಕೂಲಿಕಾರರು ಕೊಳ್ಳಬೇಕಾದ ಎಲ್ಲಾ ವಸ್ತುಗಳ ಬೆಲೆ ಏರಿದಂತೆ, ರೈತರು ಸಾಲಕ್ಕೊಳಗಾಗುತ್ತಾರೆ. ತಮ್ಮ ಭೂಮಿಯನ್ನು ಒತ್ತೆಯಿಡಬೇಕಾದ, ಮಾರಬೇಕಾದ ಅನಿವಾರ್ಯ ಪರಿಸ್ಥಿತಿಗೆ ಒಳಗಾಗುತ್ತಾರೆ. ಸಾಗುವಾಡಿದ ಫಲವತ್ತಾದ ಭೂಮಿಯನ್ನು ಹಣವುಳ್ಳ ಬಡ್ಡಿ ಸಾಹುಕಾರ ಭೂಮಾಲೀಕರಿಗೆ ಸ್ವಲ್ಪ ಸ್ವಲ್ಪವಾಗಿ ಕಳೆದುಕೊಳ್ಳುತ್ತಿದ್ದು ಜೀವನ ಸಾಗಿಸಲು ಅವರಿಗಿರುವ ದಾರಿ ಎರಡೇ. ಒಂದು ಕೂಲಿ ಮಾಡುವುದು ಎರಡು ಕಾಡು, ಮೇಡು ಗುಡ್ಡಗಳನ್ನಾಶ್ರಯಿಸಿ ಎರಡು ಕಾಳು ಬೆಳೆದುಕೊಳ್ಳುವುದು.

ಕರ್ನಾಟಕದಲ್ಲಿ ಹೀಗೆ ವಿಪುಲವಾಗಿರುವ ಸರ್ಕಾರಿ ಭೂಮಿಯನ್ನು ಆಶ್ರಯಿಸಿ ತಮ್ಮ ಕುಟುಂಬದವರೆಲ್ಲಾ ಆ ಭೂಮಿಯನ್ನು ಗೇದು, ಆಬಾದು ಮಾಡಿರುವ ಭೂಹೀನ ರೈತರಿಗೆ ಹಕ್ಕು ನೀಡಬೇಕು.

ಕರ್ನಾಟಕದಲ್ಲಿ ಸರ್ಕಾರಿಯ ಭೂಮಿ ಇನ್ನೂ ದೊಡ್ಡ ಪ್ರಮಾಣದಲ್ಲಿದೆ. ಇಡೀ ರಾಜ್ಯದ ಸಾಗುವಳಿ ಕ್ಷೇತ್ರ

ಸೆಪ್ಟೆಂಬರ್ 7ರಿಂದ13ರ ವರೆಗೂ ನಡೆಯುವ ಪಿಕೆಟಿಂಗ್‌ನಕಹಳೆಯ ಕರೆ.

ಭೂಮಿ, ಬೆಲೆ, ಕರಭಾರ, ಕೂಲಿ

ಈ ಕಹಳೆಯ ಕರೆಗೆ ರಾಜ್ಯಾದ್ಯಂತ ರೈತರು ಓಗೊಡುತ್ತಿದ್ದಾರೆ. ಈ ಘರ್ಜನೆಯ ಮೊದಲ ಬೇಡಿಕೆ 'ಭೂಮಿ, ಬೇಡಿಕೆಯಅರ್ಥವೇನು –ಒಂದು ವಿವರಣೆ.

ಸುಮಾರು ಒಂದು ಕೋಟಿ ಹೆಕ್ಟೇರುಗಳು(ಎರಡೂವರೆ ಕೋಟಿ ಎಕರೆಗಳು) ಗಳಾದರೆ ಸರ್ಕಾರಿ ಭೂಮಿ 36ಲಕ್ಷ ಹೆಕ್ಟೇರು(90ಲಕ್ಷಎಕರೆ)ಭೂಮಿ ಇದೆ. ಜೊತೆಗೆ ಅರಣ್ಯ ಭೂಮಿ ಎಂದು ಘೋಷಿಸಿದ 38.64ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಮುಳು ಕಂಟಗಳಿರುವ ಯಾವುದೇ ಸಸ್ಯಗಳಿಲ್ಲದಿರುವ ಪ್ರದೇಶ 19.79 (50 ಲಕ್ಷ ಎಕರೆ) ಲಕ್ಷ ಹೆಕ್ಟೇರುಗಳಷ್ಟು ಇದೆ. ಅಂದರೆ ಸರಕಾರದ ಹಿಡಿತದಲ್ಲಿ ಬೇರೆ ಬೇರೆ ಹೆಸರುಗಳಲ್ಲಿರುವ ಭೂಮಿ 56 ಲಕ್ಷ ಹೆಕ್ಟೇರು (ಒಂದು ಕೋಟಿ 40 ಲಕ್ಷ ಎಕರೆಗೂ) ಮಿಕ್ಕಿದೆ. ಅಂದರೆ ಈ ಸಾಗುವಳಿಯಾಗುತ್ತಿರುವ ಭೂಮಿ ಎಷ್ಟಿದೆಯೋ ಅದರ ಮೂರನೇಎರಡು ಭಾಗದಷ್ಟು ಭೂಮಿ ಇನ್ನೂ ಸರಕಾರಿ ಒಡೆತನದಲ್ಲಿದೆ. ಈ ಭೂಮಿಯಲ್ಲಿ ಅಲ್ಪ ಸ್ವಲ್ಪ ಭಾಗ ಸಾಗುವಳಿಗೆ ಬಾರದ ಭೂಮಿ ಇರಬಹುದು ನಿಜ. ಆದರೆ ಬಹಳಷ್ಟು ಕೃಷಿಗೆ ಬರುತ್ತದೆ. ಈ ಭೂಮಿಯನ್ನು ಬಿರ್ಲಾಗಳಿಗೆ 7000 ಹೆಕ್ಟೇರು ಭೂಮಿಯನ್ನು ಕೊಡಲು ಉತ್ಸುಕವಾಗಿರುವ ಸರಕಾರ ಪ್ಲಾಂಟೇಷನ್ ಮಾಲೀಕರುಗಳು, ದೊಡ್ಡ ಭೂಮಾಲೀಕರುಗಳು ಜಮೀನನ್ನು ಉತ್ತರದೆ ಸುಮ್ಮನಿರುವ ಸರಕಾರ ಭೂಹೀನರು, ಸಣ್ಣ ರೈತರು ಅರ್ಧಎಕರೆ, ಒಂದುಎಕರೆ ಭೂಮಿಉತ್ತು ಕೊಂಡರೆ ಎಲ್ಲಾಅರಣ್ಯ ನಾಶವಾಯಿತೆನ್ನುವಂತೆ ಬೊಬ್ಬೆ ಹೊಡೆಯುತ್ತದೆ. ಆದುದರಿಂದ ಕರ್ನಾಟಕದ ಭೂಹೀನ,ಭೂಮಿ ಕಡಿಮೆ ಇರುವ ರೈತರೆಲ್ಲರೂ, ಘೋಷಿಸಿ ಕೇಳಬೇಕಾಗಿದೆ. 'ಈ ಒಂದು ಕೋಟಿ 40 ಲಕ್ಷ ಎಕರೆ ಭೂಮಿಯನ್ನು ನಮಗೆ ಹಂಚಿ, ನಾವು ಈಗಾಗಲೇ ಆ ಬಾದು ಮಾಡಿರುವ ಭೂಮಿಯನ್ನು ಕೂಡಲೇನಮಗೆ ಮಾಲೀಕತ್ವ ನೀಡಿ'ಎಂದು.

"ಈ ಒಂದು ಕೋಟಿ 40 ಲಕ್ಷ ಎಕರೆ ಭೂಮಿಯನ್ನು ನಮಗೆ ಹಂಚಿ, ನಾವು ಈಗಾಗಲೇ ಆ ಬಾದು ಮಾಡಿರುವ ಭೂಮಿಯನ್ನು ಕೂಡಲೇ ನಮಗೆ ಮಾಲೀಕತ್ವ ನೀಡಿ" ಎಂದು.

ಭೂ ಸುಧಾರಣೆ

ಕರ್ನಾಟಕದಲ್ಲಿ ಭೂ ಸುಧಾರಣೆ ಎಷ್ಟರ ಮಟ್ಟಿಗೇ ಜಾರಿಗೆ ಬಂದಿದೆ ಎಂಬ ಸಂಗತಿಯಾಗಿದೆ. ಮೇಲಿನ ವರ್ಗದ,25 ಎಕರೆ ಭೂಮಿಗಿಂತ ಹೆಚ್ಚಿರುವ ಶೇ 4 ಭಾಗದ ಜನರ ಕೈಯಲ್ಲಿ ಸಾಗುವಳಿಯಾಗುತ್ತಿರುವ ಭೂಮಿಯ ಕಾಲು ಭಾಗದಷ್ಟು ಸಿಕ್ಕಿಬಿದ್ದಿದೆ. ಇದು ಒಟ್ಟು 30 ಲಕ್ಷ ಹೆಕ್ಟೇರುಗಳಷ್ಟು (75 ಲಕ್ಷ ಎಕರೆ). ಹೀಗಿರುವಾಗ ಎರಡುವರೆ ಕೋಟಿ ಎಕರೆ ಭೂಮಿಯಲ್ಲಿ ಕೇವಲ 1,14,566 ಎಕರೆಯನ್ನು ಮಾತ್ರ ಹೆಚ್ಚುವರಿ ಭೂಮಿಯೆಂದು ವಶಪಡಿಸಿ ಹಂಚಲಾಗಿದೆ. ಸಾವಿರಗಟ್ಟಲೆ ಎಕರೆ ಭೂಮಿಯುಳ್ಳವರು ಇನ್ನೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಧರ್ಮಸ್ಥಳದ ದೇವಸ್ಥಾನದ ವಿವಿಧ ಸಂಸ್ಥೆಗಳ ಹೆಸರಿನಲ್ಲಿ ಇನ್ನೂ 10ರಿಂದ12,000 ಎಕರೆಗೂ ಮಿಕ್ಕ ಭೂಮಿ ಇದೆ. ರಾಯಚೂರಿನ ರಘುನಾಥ ಹಳ್ಳಿಯ ಒಬ್ಬ ಭೂಮಾಲೀಕನ ಹಿಡಿತದಲ್ಲಿ ಇನ್ನೂ 1200 ಎಕರೆ ಭೂಮಿ ಇದೆ.

ಕಾಂಗ್ರೆಸ್(ಐ)ಎಂ.ಪಿ.ಯ ಹಿಡಿತದಲ್ಲಿ ಅಸಂಖ್ಯ ನೀರಾವರಿ ಹಾಗೂ ಒಣ ಬೇಸಾಯದ ಭೂಮಿ ಇದೆ: ಮಠಗಳ ದೇವಸ್ಥಾನಗಳ ಹೆಸರಿನಲ್ಲಿ ಸಾವಿರಾರು ಎಕರೆ ಜಮೀನಿದೆ.

ಈ ಎಲ್ಲಾ ಹೆಚ್ಚುವರಿ ಜಮೀನನ್ನು ವಶಪಡಿಸಿಕೊಳ್ಳುವಂತಹ, ಕಾನೂನಿನಲ್ಲಿರುವ ಸಂಧಿಗಳನ್ನು ಮುಚ್ಚುವಂತಹ ಪ.ಬಂಗಾಳದಲ್ಲಿ 12ಲಕ್ಷ ಎಕರೆ ಭೂಮಿಯನ್ನು 16ಲಕ್ಷ ಜನರಿಗೆ ಹಂಚಲು ಕಾರಣವಾದಂತಹ ಭೂಸುಧಾರಣಾ ತಿದ್ದುಪಡಿಗಳನ್ನು ತನ್ನಿ ಎಂಬುದು ಭೂಮಿಯ ಬಗ್ಗೆ ಇನ್ನೊಂದು ಘೋಷಣೆ.

ಗೇಣಿ ರೈತರ ಸಂಕಷ್ಟಗಳು

ಭೂ ಸುಧಾರಣಾ ಕಾನೂನಿನಡಿಯಲ್ಲಿ ಭೂಮಿ ನೀಡಲಾಯಿತೆಂದು ಹೇಳಲಾದ ರೈತರಿಗೆ ಆ ಭೂಮಿದಕ್ಕಿ

[6ನೇ ಪುಟ ನೋಡಿ]

ಕರ್ನಾಟಕದ ರೈತರ 12 ಬೇಡಿಕೆಗಳು

1. ಭೂಮಿ

(ಅ) ಸರ್ಕಾರಿ ಜಮೀನು ಉತ್ತುಕೊಂಡ ಬಡರೈತರಿಗೆ ಹಕ್ಕು ನೀಡಬೇಕು.

(ಆ) ಕಾನೂನು ವಂಚಿಸಿ ಹೆಚ್ಚು ಭೂಮಿ ಇಟ್ಟುಕೊಂಡ ಭೂ ಒಡೆಯರ ಭೂಮಿ ವಶಪಡಿಸಿಕೊಳ್ಳಬೇಕು.

(ಇ) ಭೂ ಸುಧಾರಣಾ ಕಾನೂನಿನಡಿಯಲ್ಲಿ ಭೂಮಿ ಪಡೆದ ಗೇಣಿದಾರ ರೈತರ ಸಂಕಷ್ಟಗಳು ದೂರವಾಗಬೇಕು.

2. ಬೆಲೆ

(ಅ) ಕರ್ನಾಟಕದ ಬೆಳೆಗಳಾದ ಭತ್ತ, ರಾಗಿ,ಜೋಳ, ಸಜ್ಜೆ, ಗೋಧಿ, ಮು.ಜೋಳ, ತೊಗರಿ, ಶೇಂಗಾ [ನೆಲಗಡಲೆ], ಹತ್ತಿ,ಕಬ್ಬು, ಅಡಿಕೆ, ತೆಂಗು ಮಾತ್ರವಲ್ಲ ಹಾಲು, ರೇಷ್ಮೆ, ಹಣ್ಣು ತರಕಾರಿಗಳಿಗೆ ಬೆಂಬಲ ಬೆಲೆಗಳು ನಿಗಧಿತವಾಗಬೇಕು–ಈ ಬೆಲೆಗಳು ಬೇರೆ ಎಲ್ಲಾ ಬೆಲೆ ಸೂಚ್ಯಾಂಕಕ್ಕೆ, ಬೆಳೆಯುವ ವೆಚ್ಚದ ಏರಿಕೆಗೆ ಸಮಾನವಾಗಿ ಹೆಚ್ಚು ನಿಗದಿಯಾಗಬೇಕು.

(ಆ) ಕೃಷಿ ಫಸಲಿಗೆ ಬೆಂಬಲ ಬೆಲೆಗಳನ್ನು ಬಿತ್ತುವ ಮೊದಲೇ ಘೋಷಿತವಾಗಬೇಕು. ಸರ್ಕಾರಿ-ಸಹಕಾರಿ ಸಂಘ ಸಂಸ್ಥೆಗಳು ಈ ಘೋಷಿಸ್ಪಟ್ಟ ಬೆಂಬಲ ಬೆಲೆಗೆ ವ್ಯಾಪಕ ಪ್ರಮಾಣದಲ್ಲಿ ಮಾರುಕಟ್ಟೆ ಪ್ರವೇಶಿಸಿಕೊಳ್ಳಬೇಕು. ಈ ಸಂಸ್ಥೆಗಳಿಗೆ ಸರಕಾರ ಅವಶ್ಯವಾದಷ್ಟು ಹೆಚ್ಚು ಹಣ ಬಜೆಟನಲ್ಲಿ ಮೀಸಲಾಗಿಡಬೇಕು.

3. ಕೃಷಿ ಕೂಲಿ

(ಅ) ಕೃಷಿ ಕಾರ್ಮಿಕರಿಗೆ ಬೆಲೆ ಏರಿಕೆಗೆ ತಕ್ಕಂತೆ ಕನಿಷ್ಟ ವೇತನ ನಿಗದಿಯಾಗಬೇಕು. ಅಗಿಂದಾಗ್ಗೆ-ಪುನ ವಿಮರ್ಶಿತವಾಗಬೇಕು. ಈ ವೇತನವನ್ನು ಎಲ್ಲಾ ಪ್ರದೇಶದಲ್ಲಿಯೂ ಜಾರಿಗೊಳಿಸುವುದಕ್ಕೆ ಸಿಬ್ಬಂದಿ ವ್ಯವಸ್ಥೆ ಆಗಬೇಕು.

(ಆ) ಅಖಿಲ ಭಾರತ ಕೃಷಿ ಕಾರ್ಮಿಕ ಸಂರಕ್ಷಣಾ ಕಾನೂನು ರೂಪಿಸಿ ಪಾಸು ಮಾಡಿ ಜಾರಿಗೆ ತರಬೇಕು.

4. ಬರಗಾಲ ಪರಿಹಾರ ಕಾಮಗಾರಿ

ಬರ ಪ್ರದೇಶಗಳಲ್ಲಿ ಮಳೆ ಅಭಾವ ತಲೆ ದೋರಿದ ಮರುಕ್ಷಣವೇ ಪರಿಹಾರ ಕಾಮಗಾರಿ ಆರಂಭಿಸಬೇಕು. ಶಾಶ್ವತ ಬರಗಾಲ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಈ ಕಾಮಗಾರಿಗಳಲ್ಲಿ ಅತೀವ ಭ್ರಷ್ಟಾಚಾರ ತಡೆಗಟ್ಟಲು ಸರ್ವಪಕ್ಷ ಉಸ್ತುವಾರಿ ಸಮಿತಿಗಳನ್ನು ನೇಮಿಸಬೇಕು.

5. ನೀರಾವರಿ ವಿಸ್ತರಣೆ

(ಅ) ಕರ್ನಾಟಕ ರಾಜ್ಯದಲ್ಲಿ ಇನ್ನೂ ಬಳಕೆಯಾಗದಿರುವ ವ್ಯರ್ಥವಾಗಿ ಸಮುದ್ರಕ್ಕೆ ಹರಿಯುತ್ತಿರುವ ಅರ್ಧದಷ್ಟು ಜಲ ಸಂಪನ್ಮೂಲಗಳನ್ನು ಉಪಯೋಗಿಸಿ ನೀರಾವರಿ ಒದಗಿಸುವ ಎಲ್ಲಾ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕು.

(ಆ) ಕೃಷ್ಣಾ ಮೇಲ್ದಂಡೆ, ಕಾವೇರಿ ಹೇಮಾವತಿ, ಮೊದಲಾದ ಯೋಜನೆಗಳನ್ನು ಕೂಡಲೇ ಕೈಗೊಳ್ಳಬೇಕು.

6. ಕೇಂದ್ರ ರಾಜ್ಯ ಸರಕಾರಗಳಿಂದ ಬೆಲೆ ಏರಿಕೆ ಕರಭಾರ

ಕೇಂದ್ರ ಸರ್ಕಾರ ಡಿಸೆಲ್, ಸೀಮೆ ಎಣ್ಣೆ, ಸೀಮೆಂಟ್, ಉಕ್ಕು, ರಸಗೊಬ್ಬರ, ಔಷಧಿಗಳ ಬೆಲೆ ಏರಿಸಿ ರೈತರನ್ನು ಕಂಗಾಲು ಮಾಡಿದರೆ ರಾಜ್ಯ ಸರಕಾರ ವಿದ್ಯುತ್ ದರ-ನೀರಾವರಿ ಕರ, ಅಭಿವೃದ್ಧಿ ಕರ ಎಂಬ ತೆರಿಗೆಗಳನ್ನು ಹಾಕುತ್ತಿದೆ. ಇವುಗಳನ್ನು ಕೂಡಲೇ ಹಿಂತೆಗೆಯಬೇಕು.

7. ಅಗ್ಗದ ದರದಲ್ಲಿ ಅವಶ್ಯಕ ವಸ್ತುಗಳ ಸರಬರಾಜು

14 ಜೀವನಾವಶ್ಯಕ ವಸ್ತುಗಳನ್ನು ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶಗಳ ನಡುವೆ ತಾರತಮ್ಯ ಮಾಡದೇ ಅಗ್ಗದ ಬೆಲೆಯಲ್ಲಿ ಒದಗಿಸಬೇಕು. ಹಸಿರು ಕಾರ್ಡ್‌ಗೆ ನೀಡುತ್ತಿರುವ ಅಕ್ಕಿಯ ಪ್ರಮಾಣವನ್ನು ಪ್ರತಿ ಕುಟುಂಬಕ್ಕೆ 10 ಕೆ.ಜಿ.ಗೆ ಬದಲಾಗಿ ಪ್ರತಿ ವ್ಯಕ್ತಿಗೆ 10 ಕೆ.ಜಿ.ಗೆ ಏರಿಸಬೇಕು. ಕೇಸರಿ ಕಾರ್ಡಿನವರಿಗೂ ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯ, ಸಕ್ಕರೆ, ಸೀಮೆಎಣ್ಣೆಗಳನ್ನು ಒದಗಿಸಬೇಕು.

8. ಕೃಷಿ ಸಾಲ

ಸಾಲದ ಬಡ್ಡಿ ದರ ಇಳಿಸಬೇಕು, ಸಾಲ ನೀಡಿಕೆ ಪದ್ಧತಿಯನ್ನು ಸರಳಗೊಳಿಸಿ ಎಲ್ಲರಿಗೂ ಸಾಲ ಸಿಗುವಂತಾಗಬೇಕು. ಖಾಸಗಿ ಬಡ್ಡಿ ಸಾಹುಕಾರರ ಪೀಡೆಗೊಳಗಾಗುವುದನ್ನು ತಪ್ಪಿಸಲು ದೊಡ್ಡ ಪ್ರಮಾಣದಲ್ಲಿ ಸಾಲ ಸಿಗುವಂತಾಗಬೇಕು. ಇಡೀ ಜಿಲ್ಲೆಯನ್ನು ಫಾಲ್ ಎಂದು ಘೋಷಿಸುವುದನ್ನು ತಪ್ಪಿಸಿ ಗುಲ್ಬರ್ಗಾ, ಹಾಸನ ಜಿಲ್ಲೆಗಳಲ್ಲಿ ಕೂಡಲೇ ಸಾಲ ನೀಡಿಕೆ ಆರಂಭವಾಗಬೇಕು.

9ರಿಂದ 12ರವರೆಗಿನ ನಾಲ್ಕು ಬೇಡಿಕೆಗಳನ್ನು ಸ್ಥಳೀಯ ಬೇಡಿಕೆಗಳಿಗಾಗಿ ಬಿಡಲಾಗಿದೆ. ಪ್ರಾಂತ ರೈತ ಸಂಘದ ಜಿಲ್ಲಾ ಘಟಕಗಳು ಈ ಬೇಡಿಕೆಗಳನ್ನು ರೂಪಿಸಿಕೊಳ್ಳಬೇಕು.

ಪಕ್ಷದ ಅಂತರಿಕ ಪ್ರಜಾಸತ್ತೆ

ಕಾಂ ಇ.ಎಂ. ಎಸ್.ರವರಿಂದ ಪ್ರಶ್ನೆಗಳಿಗೆಉತ್ತರ

ಪ್ರಶ್ನೆ 1.

ಕಾರ್ಮಿಕ ವರ್ಗದ ಸಾಮೂಹಿಕ ಕ್ರಾಂತಿಕಾರಿ ಪಕ್ಷ ಎಂಬ ಕಾಂ.ಇ.ಎಂ.ಎಸ್.ರವರ ಲೇಖನದ ಕೊನೆಯ ಭಾಗದಲ್ಲಿ, ಕೇರಳದಲ್ಲಿ ಪಕ್ಷವನ್ನು ಕೇವಲ ಒಂದುಚುನಾವಣೆಯ ಸಂಘಟನೆಯನ್ನಾಗಿಬದಲಾಯಿಸಲು ಪ್ರಯತ್ನ ನಡೆಯಿತು ಎಂದೂ, ಆದರೆ ಅದನ್ನು ತಡೆಗಟ್ಟುವುದಕ್ಕೆ ಕೇಂದ್ರ ಸಮಿತಿ ಧೃಢವಾದ ಧೋರಣೆ ತಳೆಯಿತು ಎಂದೂ ಬರೆದಿದ್ದೀರಿ. ಆದರೆ ಪಾಲಿಟ್ ಬ್ಯೂರೊ ಹಾಗೂ ಕೇಂದ್ರ ಸಮಿತಿಗಳೇ ಯಾವುದಾದರೊಂದು ಘಟ್ಟದಲ್ಲಿ ಪಕ್ಷವನ್ನು ಚುನಾವಣೆಯ ಪಕ್ಷವನ್ನಾಗಿ ಮಾರ್ಪಡಿಸಲು ಪ್ರಯತ್ನ ಮಾಡಿದರೆ ಅದನ್ನು ತಡೆಗಟ್ಟುವುದು ಹೇಗೆ ? ಈ ಧೋರಣೆಯನ್ನು ತಿದ್ದಲು ಯಾರಿಂದ ಸಾಧ್ಯ ?

ಪ್ರಶ್ನೆ 2.

ಪಕ್ಷದ ಪ್ರಾಥಮಿಕ ಘಟಕಗಳಾದ ಶಾಖೆ ಸ್ಥಳೀಯ ಸಮಿತಿಗಳೇ ಜನರ ಬಳಿ ನೇರವಾಗಿ ಸಂಬಂಧವಿಟ್ಟು. ಕೆಲಸ ಮಾಡುವುದು. ಇಂದಿನ ಪರಿಸ್ಥಿತಿ ಈ ಶಾಖೆ ಹಾಗೂ ಸ್ಥಳೀಯ ಸಮಿತಿಗಳ ಅವಸ್ಥೆಯನ್ನು ನೋಡಿದರೆ ಕೇವಲ ಮೇಲಿನಿಂದ ಬಂದ ನಿರ್ದೇಶನಗಳನ್ನು ಜಾರಿಗೊಳಿಸುವ ಸಮಿತಿಗಳಾಗಿ ಅಧಃ ಪತನಗೊಂಡಿವೆ. ಈ ಸಮಿತಿಗಳು ತನ್ನ ಮಿತಿಯಲ್ಲಿರುವ ಪ್ರದೇಶದ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡುವ ಶಕ್ತಿಯನ್ನು ಸ್ವಯಂ ಚಲನೆಯನ್ನು ಕಳೆದು ಕೊಳ್ಳುತ್ತಿವೆ. ಇದನ್ನು ನೋಡುವಂತಹ ಜವಾಬ್ದಾರಿ ಕೇಂದ್ರ ಸಮಿತಿ ಹಾಗೂ ಪಾಲಿಟ್ ಬ್ಯೂರೋಗೆ ಇಲ್ಲವೇ ? ಕೇಂದ್ರ ಸಮಿತಿ ಹಾಗೂ ಪಾಲಿಟ್ ಬ್ಯೂರೋವಿನ ಕರ್ತವ್ಯ ಅಖಿಲ ಭಾರತದ ಪ್ರಶ್ನೆಗಳನ್ನು ನಿರ್ವಹಿಸುವುದು ಮಾತ್ರವೇ ?

(ಪ್ರಶ್ನೆ ಕೇಳಿದವರು ಕೇರಳದ ಇಬ್ಬರು ಸಂಗಾತಿಗಳು)

ಶಾಖೆಗಳಿಂದ ಆರಂಭವಾಗಿ ಕೇಂದ್ರ ಸಮಿತಿಯವರೆಗೂ ಒಂದೇ ರೀತಿಯಲ್ಲಿ ಪಕ್ಷದ ಶಾಖೆಗಳು ಶಿಸ್ತು ಬದ್ಧವಾಗಿಕೆಲಸಮಾಡುವುದು.ದಿನ ನಿತ್ಯಉದ್ಭವಿಸುವ ಸಮಸ್ಯೆಗಳಿಗೆ ಸಂಬಂಧಿಸಿ ಕೆಳಗಿನಿಂದ ಮೇಲಿನ ಸಮಿತಿಯವರೆಗೆ ಅಭಿಪ್ರಾಯ ವಿನಿಮಯ ನಡೆಸುತ್ತಾ ಇರಬೇಕು. ಈ ವೇಳೆಯಲ್ಲಿ ತಪ್ಪುಗಳು ಸಂಭವಿಸಬಹುದು ಇದನ್ನು ತಿದ್ದಿ ಕೊಂಡು ಸರಿಪಡಿಸಿಕೊಳ್ಳಬೇಕು. ಇದೇ ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷವೊಂದು ಅನುಸರಿಸಬೇಕಾದ ಸಂಘಟನಾತ್ಮಕ ಧೋರಣೆ.

ಇದರ ಅಂಗವಾಗಿ ವಿಮರ್ಶೆ ಮತ್ತು ಸ್ವಯಂ ವಿಮರ್ಶೆ ನಿರಂತರವಾಗಿ ನಡೆಯುತ್ತಿರುತ್ತದೆ. ಪಕ್ಷದ ಪ್ರತಿಯೊಬ್ಬ ಸದಸ್ಯನಿಗೆ ಅವರು ಸದಸ್ಯನಾಗಿರುವ ಘಟಕದಲ್ಲಿ ಅವರ ಸ್ವಂತ ಅಭಿಪ್ರಾಯಗಳನ್ನು ಮುಚ್ಚುಮರೆ ಇಲ್ಲದೆ ಹೇಳಲು ಮತ್ತು ಮುಖಂಡರನ್ನು, ಮೇಲಿನ ಸಮಿತಿಯನ್ನು ವಿಮರ್ಶಿಸಲು ಪ್ರತಿ ಸದಸ್ಯನಿಗೂ ಹಕ್ಕಿದೆ. ಅದೇ ರೀತಿ ಘಟಕಗಳಿಂದ, ವ್ಯಕ್ತಿಗಳಿಂದ ಬರುವ ವಿಮರ್ಶೆಗಳು ಹಾಗೂ ಅಭಿಪ್ರಾಯಗಳನ್ನು ಗಮನವಿಟ್ಟು ಅಭ್ಯಸಿಸಿ ಪಕ್ಷದ ಧೋರಣೆ ಹಾಗೂ ದಿನ ನಿತ್ಯದ ಕಾರ್ಯರಂಗದಲ್ಲಿ ಅವಶ್ಯವಾದ ಬದಲಾವಣೆಯನ್ನು ಮಾಡಬೇಕಾದ್ದು ಪ್ರತಿಯೊಂದು ಮೇಲ್ಸಮಿತಿಯ ಕರ್ತವ್ಯ.

ಅದೇ ರೀತಿ ತಾನು ಸದಸ್ಯನಾಗಿರುವ ಸ್ವಂತ ಘಟಕದಲ್ಲಿ ಅಭಿಪ್ರಾಯ ವ್ಯಕ್ತ ಮಾಡುವುದಲ್ಲದೆ ಬೇರೆಲ್ಲಿಯೂ ಅಭಿಪ್ರಾಯ ವ್ಯಕ್ತ ಪಡಿಸಲಾಗದು ಹಾಗೂ ವಿಮರ್ಶೆ ಮಾಡಲಾಗದು.

ತನ್ನ ಸ್ವಂತ ಘಟಕವೂ ಸೇರಿ ಇಡೀ ಪಕ್ಷ ತೆಗೆದುಕೊಳ್ಳುವ ನಿಲುವು ಹಾಗೂ ತೀರ್ಮಾನವನ್ನು ಕಡ್ಡಾಯವಾಗಿ ಜಾರಿ ಮಾಡಬೇಕು. ಈ ಬಗ್ಗೆ ಅಭಿಪ್ರಾಯ ಭಿನ್ನತೆ ಇದ್ದರೂ ಕೂಡ ತಪ್ಪದೆ ಈ ತೀರ್ಮಾನವನ್ನು ಜಾರಿಮಾಡುವ ಕರ್ತವ್ಯ ಪ್ರತಿಯೊಬ್ಬ ಪಕ್ಷದ ಸದಸ್ಯನಿಗೂ ಇದೆ.

ಅದೇ ರೀತಿ ಮೇಲ್‌ಘಟಕಗಳು ತೆಗೆದುಕೊಳ್ಳುವ ತೀರ್ಮಾನವನ್ನು ಎಲ್ಲಾ ಕೆಳಘಟಕಗಳ ಸದಸ್ಯರೂ ಖಂಡಿತವಾಗಿ ಜಾರಿಮಾಡಬೇಕು.

ಈ ತಿಳುವಳಿಕೆಯ ಆಧಾರದಲ್ಲಿಯೇ ಕೇರಳದಲ್ಲಿ ಆದ ತಪ್ಪನ್ನು ತಿದ್ದುವ ಪ್ರಯತ್ನ ನಡೆದಿದ್ದು ಅದರಲ್ಲಿ ಕೇಂದ್ರದ ನಾಯಕತ್ವದ ಜೊತೆಯಲ್ಲಿಯೇ ಕೇರಳದ ಸಂಗಾತಿಗಳೂ ಸಹಾಯ ಮಾಡಿದರು. ಮೊದಲನೇ ಪ್ರಶ್ನೆಯಲ್ಲಿ ಸೂಚಿತವಾದಂತೆ ಪಾಲಿಟ್ ಬ್ಯೂರೋ ಹಾಗೂ ಕೇಂದ್ರ ಸಮಿತಿ ಈ ತಪ್ಪುಗಳ ತಿದ್ದುವಿಕೆಯಲ್ಲಿ ಏಕಪಕ್ಷೀಯ ವಾಗಿರಲಿಲ್ಲ.

ಕೇರಳದ ಪಕ್ಷದ ಸಮಿತಿಗಳಲ್ಲಿ ಮತೀಯ ಪಕ್ಷಗಳ ಜೊತೆ ಸಂಬಂಧ ವಿವರಿಸಿಕೊಳ್ಳುವ ಪಕ್ಷದ ಧೋರಣೆಯನ್ನು ಬದಲಾಯಿಸಬೇಕೆಂಬ ಅಭಿಪ್ರಾಯ ಹಲವಾರು ವರ್ಷಗಳಿಂದ ಇತ್ತು. ಅಷ್ಟೆ ಅಲ್ಲ. ಕೇರಳದಲ್ಲಿ ಅನುಸರಿಸುತ್ತಾ ಬಂದ ಧೋರಣೆ ಕೇರಳಕ್ಕೆ ಮಾತ್ರ ಸಂಬಂಧ ಪಡದೇ ಅಖಿಲ ಭಾರತ ಪ್ರಶ್ನೆಯೂ ಆಗಿರುವುದರಿಂದ ಪಕ್ಷದ ಬೇರೆ ರಾಜ್ಯ ಘಟಕಗಳೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದುವು.

ಉತ್ತರ : ಕೆಳಗಿನ ಶಾಖೆಗಳಿಂದ ಕೇಂದ್ರ ಸಮಿತಿಯ ವರೆವಿಗೂ ಒಂದೇ ರೀತಿಯಲ್ಲಿ ಪಕ್ಷದ ಶಾಖೆಗಳು ಶಿಸ್ತುಬದ್ಧವಾಗಿ ಕೆಲಸ ಮಾಡುವವು. ದಿನ ನಿತ್ಯ ಉದ್ಭವಿಸುವ ಸಮಸ್ಯೆಗಳಿಗೆ ಕೆಳಗಿನಿಂದ ಮೇಲಿನ ಸಮಿತಿಯವರೆವಿಗೆ ಅಭಿಪ್ರಾಯ ವಿನಿಮಯ ನಡೆಸುತ್ತಾ ಇರಬೇಕು. ಈ ವೇಳೆಯಲ್ಲಿ ಕೆಲಸ ಮಾಡುವಾಗ ಕೆಲವು ತಪ್ಪುಗಳಾಗಬಹುದು ಇದನ್ನು ತಿದ್ದಿಕೊಂಡು ಸರಿಪಡಿಸಿಕೊಳ್ಳುವುದು. ಇದೇ ಕಾರ್ಮಿಕ ವರ್ಗದ ಕ್ರಾಂತಿಕಾರೀ ಪಕ್ಷಕ್ಕೆ ಇರಬೇಗಿರುವ ಸಂಘಟನಾತ್ಮಕ ಧೋರಣೆ.

ಈ ಅಭಿಪ್ರಾಯಗಳಿಗೆ ಅಧೀನವಾಗಿಯೇ ಪಿ.ಬಿ. ಮತ್ತು ಸಿ.ಸಿ. ತಮ್ಮ ಕೆಲಸವನ್ನು ನಿರ್ವಹಿಸಿದ್ದು ಈ ಬದಲಾವಣೆಯಲ್ಲಿ ಎರಡು ಘಟ್ಟಗಳಿವೆ. ಮೊದಲನೆಯ ಘಟ್ಟದಲ್ಲಿ 1974ರಲ್ಲಿ ಕೇಂದ್ರ ಸಮಿತಿಯ ಪ್ರತಿನಿಧಿಗಳು ರಾಜ್ಯ ಸಮಿತಿಯ ಸಂಪೂರ್ಣ ಸಭೆಯಲ್ಲಿ ಭಾಗವಹಿಸಿ ಚರ್ಚೆ ಮಾಡಿದರು. ಕೇಂದ್ರ ಸಮಿತಿಯ ಸಂಗಾತಿಗಳು, ಕೇರಳದ ಸಂಗಾತಿಗಳು ವ್ಯಕ್ತಪಡಿಸಿದ ಅಭಿಪ್ರಾಯಗಳು ಕೇಂದ್ರ ಸಮಿತಿಯ ಒಟ್ಟು ಕಣ್ಣೋಟಕ್ಕಿಂತ ಭಿನ್ನವಾಗಿದೆಯೆಂದು ವ್ಯಕ್ತಪಡಿಸಿದರೂ ಕಾರ್ಯರಂಗದಲ್ಲಿ ಅಲ್ಲಿಯವರೆಗೂ ಅನುಸರಿಸಿದ ಧೋರಣೆಯನ್ನೇ ಅನುಸರಿಸಲು ಹೇಳಿದರು. ಇದೇ ಧೋರಣೆಯನ್ನೇ ಕಾರ್ಯರಂಗದಲ್ಲಿ ಮುಂದುವರಿಸುತ್ತಾ, 1980-81ರಲ್ಲಿ ಅಧಿಕಾರಕ್ಕೆ ಬಂದ ಎಡ ಪ್ರಜಾಪ್ರಭುತ್ವ ರಂಗದ ಸರ್ಕಾರದ ಕೆಲಸಯಲ್ಲಿರುವ ಸಂಬಂಧವನ್ನು ಕ್ರಮೇಣ ದೂರಮಾಡಬೇಕೆಂದು ಈ ಘಟ್ಟದಲ್ಲಿ ಕೇಂದ್ರ ಸಮಿತಿ ನಿರ್ದೇಶಿಸಿತು.ಆದರೂ ಇದನ್ನು ಈ ಕೂಡಲೇ ಜಾರಿಗೆ ತರಬೇಕೆಂದು ನಿರ್ದೇಶನ ನೀಡಿರಲಿಲ್ಲ. ಕೇರಳ ಸಮಿತಿಯಲ್ಲಿ ಒಮ್ಮತ ತೀರ್ಮಾನ ತೆಗೆದುಕೊಂಡು ಅದನ್ನು ಕಾರ್ಯರೂಪಕ್ಕೆ ತರುವಂತಹ ಸ್ಥಿತಿ ಬರುವವರೆಗೆ ಸಮಯ ನೀಡಬೇಕೆಂದು ಕೇಂದ್ರ ಸಮಿತಿ ತೀರ್ಮಾನಿಸಿತು.

ಅದೇ ರೀತಿಯಲ್ಲಿ ಕೇಂದ್ರಸಮಿತಿಯ ನಿರ್ದೇಶನ ಜಾರಿಮಾಡಲು ಬೇಕಾದ ಪ್ರಯತ್ನವನ್ನು ರಾಜ್ಯ ಸಮಿತಿ ನಡೆಸವನ್ನೂ ವಿಮರ್ಶೆ ಮಾಡುವ ಸಮಯದಲ್ಲಿ ಎರಡನೆಯ ಘಟ್ಟ ಆರಂಭವಾಯಿತು.

ಕಾರ್ಯರಂಗದಲ್ಲಿ ಅನುಸರಿಸುತ್ತಿರುವ ಧೋರಣೆಯನ್ನು ಬದಲಾಯಿಸಿ ಅಖಿಲ ಭಾರತ ಮುಸ್ಲಿಂ ಲೀಗ್ ಜೊತೆಬೇಕೆಂದು ಸೂಚಿಸಿತು. ಕೇಂದ್ರಸಮಿತಿಯ ತೀರ್ಮಾನವನ್ನು ಒಪ್ಪಿಕೊಳ್ಳುವವರ ಬಹುಮತವನ್ನು ಹೆಚ್ಚಿಸುವುದು ಈ ತೀರ್ಮಾನವನ್ನು ಅಂಗೀಕರಿಸಿರುವವರನ್ನು ಒಲಿಸಿಕೊಂಡು ಅವರ ಸಂಖ್ಯೆಯನ್ನು ಕಡಿಮೆ ಮಾಡುವ ದಿಸೆಯಲ್ಲಿ ತೀರ್ಮಾನವನ್ನೇ ಕೇಂದ್ರ ಸಮಿತಿ ತೆಗೆದುಕೊಂಡದ್ದು. ಅದರಿಂದಾಗಿಯೇ 1985ರ ನವೆಂಬರ್‌ದಲ್ಲಿ ಸೇರಿದ ರಾಜ್ಯ ಸಮ್ಮೇಳನದಲ್ಲಿ ಚರ್ಚೆ ವಿವಾದ ನಡೆದು ಸಮ್ಮೇಳನದಲ್ಲಿನ ಬಹು ಮತಾಭಿಪ್ರಾಯ ಕೇಂದ್ರಸಮಿತಿಯ ನಿರ್ದೇಶನವನ್ನು ಅಂಗೀಕರಿಸಿದ್ದು ಸಮ್ಮೇಳನದಲ್ಲಿ ವಿರೋಧ ಮಾಡಿದವರಲ್ಲಿ ಕೂಡ ಬಹಳ ಜನ ತೀರ್ಮಾನವನ್ನು ಅಂಗೀಕರಿಸಿದರು.

ಇದರಲ್ಲಿ ಚೆನ್ನಾಗಿ ವ್ಯಕ್ತಗೊಳ್ಳುವ ಒಂದು ಅಂಶವೆಂದರೆ ಕೇಂದ್ರ ಸಮಿತಿಯ ತೀರ್ಮಾನ ಏಕ ಪಕ್ಷೀಯವಲ್ಲ ಎಂಬುದು ಭಾರತದ ಎಲ್ಲಾ ರಾಜ್ಯಗಳ ಪಾರ್ಟಿ ಘಟಕಗಳ ಬಹುಮತಾಭಿಪ್ರಾಯವನ್ನು ಕ್ರೋಢೀಕರಿಸಿಕೊಂಡು ಅಲ್ಲಿಯ ಸಂಗಾತಿಗಳ ಬಹುಮತಾಭಿಪ್ರಾಯವನ್ನು ರೂಪಿಸಿಕೊಳ್ಳುವುದರಿಂದಲೇ ಕೇಂದ್ರ ಸಮಿತಿಯ ತಪ್ಪನ್ನು ತಿದ್ದಲು ಸಾಧ್ಯ. ಕೆಳ ಘಟಕಗಳೊಡನೆ ಸಂಬಂಧ, ಅವರ ಅಭಿಪ್ರಾಯ ವಿಮರ್ಶೆ ಇವುಗಗಳಿಗೆ ಕೇಂದ್ರಸಮಿತಿ ಗಮನ ನೀಡುತ್ತ ಬರುವುದೇ ಇಡೀ ಭಾರತದಲ್ಲಿ ಪಕ್ಷಅನುಸರಿಸುವ ರೀತಿ.ಇದೇಕೆ ೦ಂದ್ರ ಸಮಿತಿ ನಿರ್ವಹಿಸುವ ಸಜೀವ ಪಾತ್ರ.

ಇಲ್ಲಿಯೇ ಒಂದನೇ ಪ್ರಶ್ನೆಯಲ್ಲಿ ವ್ಯಕ್ತವಾಗುವ ಪಾಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿ ಪಕ್ಷವನ್ನು ಚುನಾವಣಾ ಯಂತ್ರವನ್ನಾಗಿ ಮಾಡಲು ಪ್ರಯತ್ನಿಸಿದರೆ ಎಂಬ ಭಯಕ್ಕೆ ಉತ್ತರ ಇರುವುದು. ಈ ದಾರಿಯನ್ನು ಹಿಡಿಯುವ ಯಾವುದೇ ಸೂಚನೆ ದೊರೆತರೆ ಅದನ್ನು ಅಲ್ಲಿಯೇ ತಿದ್ದಲು ಸಮರ್ಥವಾದ ಸದಾ ಜಾಗ್ರತವಾಗಿರುವ ಸದಸ್ಯರನ್ನೊಳ ಸಂಘಟನೆಯಾಗಿ ಪಕ್ಷವನ್ನು ಬೆಳೆಸಲು ಶ್ರಮಪಡುತ್ತಿರುವುದು.

ಆದ್ದರಿಂದಲೇ ಶಾಖೆಯವರೆಗೂ ಇರುವ ಕೆಳಘಟಕಗಳನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯ ಬೇಕಾದ ಹೊಣೆ ಪಾಲಿಟ್‌ಬ್ಯೂರೊ ಕೇಂದ್ರ ~~ಎಂದು ಸಿದ್ಧ ಪಡಿಸಿಟ್ಟಿ ಇವನ್ನು~~ ಉಲ್ಲೇಖಿಸಿದ್ದೇನೆ. ಪ್ರತಿಯೊಂದು ಕಾರ್ಖಾನೆಯ ಕಾರ್ಮಿಕರೂ ತಮ್ಮ ಮಾಲೀಕನೇ ಅತಿ ದುಷ್ಟ ಎನ್ನುತ್ತಾರೆ. ನಮ್ಮ ಪ್ರಕಾರ ಮತ್ತು ಯಾವ ಬಂಡವಾಳಶಾಹಿಯೂ ಇನ್ನೊಬ್ಬ ಬಂಡವಾಳ ಶಾಹಿಗಿಂತ ಹೆಚ್ಚು ದುಷ್ಟನಲ್ಲ. ತಮ್ಮ ಎಲ್ಲರ ಮಾಲಿಕರೂ ದುಷ್ಟರೆಂದು ಕಾರ್ಮಿಕರೆಲ್ಲಾ ಒಟ್ಟಾಗಿ ತೀರ್ಮಾನಕ್ಕೆ ಬರಬಹುದು. ನಮಗೆ ಬೇಕಾಗಿರುವುದು ಒಂದು ವರ್ಗ ನಿಲುವೆಯೇ ಹೊರತು ಯಾವುದೋ ಒಬ್ಬ ಮಾಲಿಕನನ್ನೇ ವಿರೋಧಿಸುವುದು ಅಲ್ಲ. ಅಂದರೆ ಒಂದು ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ನಾವು ಹೋರಾಟಗಳನ್ನು ನಡೆಸುವುದು ಸಾಧ್ಯವಿಲ್ಲ ಎಂದು ಇದರ ಅರ್ಥವಲ್ಲವೆಂದು ಮತ್ತೊಮ್ಮೆ ಹೇಳಬೇಕಾಗುತ್ತದೆ. ವಾಸ್ತವವಾಗಿ ಬಿಕ್ಕಟ್ಟಿನ ಸಮಯದಲ್ಲೇ ಹೋರಾಟಗಳು ಚಿಮ್ಮಿ ಬರುವುದು. ಮತ್ತು ಕ್ರಾಂತಿ

[6ನೇ ಪುಟ ನೋಡಿ]

ವಿವಿಧ ಜಿಲ್ಲೆಗಳಲ್ಲಿ ಸಿ ಮತ್ತು ಡಿ ಜಮೀನು

(4ನೇ ಪುಟದಿಂದ)

ಜಿಲ್ಲೆ	ಒಟ್ಟು ಸರ್ಕಾರಿ ಬೀಳು ಭೂಮಿ	ಇದರಲ್ಲಿ ಮೋಜಣಿ ನಡೆಸಿದ್ದು	ಮೋಜಣಿ ನಡೆಸಿದ ಸರ್ಕಾರಿ ಭೂಮಿಯಲ್ಲಿ ಸಿ ಮತ್ತು ಡಿ ಭೂಮಿ		ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಿರುವುದು		
			'ಸಿ' ವರ್ಗ	'ಡಿ' ವರ್ಗ	'ಸಿ' ವರ್ಗ	'ಡಿ' ವರ್ಗ	ಒಟ್ಟು
1. ಬೆಂಗಳೂರು	2,14,464	65,989	15,702	30,046	2,762	7,833	10,595
2. ಬೆಳಗಾವಿ	8375	8375	870	4016	1044	229	1273
3. ವಿಜಾಪುರ	3249	3249	75	1591	20	162	182
4. ಬೀದರ್	58,104	58704	36077	12018	21007	8226	29233
5. ಬಳ್ಳಾರಿ	1,38,315	117723	40122	37739	10787	20202	30989
6. ಚಿತ್ರದುರ್ಗ	2,10,925	127998	41034	36444	40389	31916	72305
7. ದಕ್ಷಿಣ ಕನ್ನಡ	2,50,129	104481	77230	7397	73762	12702	86464
8. ಚಿಕ್ಕಮಗಳೂರು	3,52,071	95519	31558	14742	22694	10086	32780
9. ಧಾರವಾಡ	16,098	16098	2626	5413	3617	4995	8612
10. ಕಲ್ಬುರ್ಗಿ	1,35684	112980	44694	40716	62390	31290	93680

ವಿದ್ಯುತ್ ದರ ಏರಿಕೆಗೆ ಪ್ರತಿಭಟನೆ

ಹರಿಹರ

ಸಿ.ಪಿ.ಐ.[ಎಂ] ಮತ್ತು ಸಿ.ಪಿ.ಐ. ಗಳ ಜಂಟಿ ಕರೆಯನುಸಾರ ಜುಲೈ 17 ರಂದು ಹರಿಹರದ ಕೆ.ಇ.ಬಿ. ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ಸಿ.ಪಿ.ಐ. [ಎಂ]ನ ಹರಿಹರ ನಗರ ಸಮಿತಿಯ ನೇತೃತ್ವದಲ್ಲಿ ನಡೆದ ಈ ಸತ್ಯಾಗ್ರಹದಲ್ಲಿ ಕಿರ್ಲೋಸ್ಕರ್, ಮತ್ತಿತರ ಕಾರ್ಖಾನೆಗಳ ಕಾರ್ಮಿಕರು ಬೀಡಿ ಕಾರ್ಮಿಕರು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಸಿ.ಪಿ.ಐ.(ಎಂ) ಕಚೇರಿಯಿಂದ ಮೆರವಣಿಗೆಯಲ್ಲಿ ಹೊರಟ ಸತ್ಯಾಗ್ರಹಿಗಳು ತಹಸೀಲದಾರರಿಗೆ ಮನವಿ ಸಲ್ಲಿಸಿ ಕೆ.ಇ.ಬಿ ಕಚೇರಿಗೆ ಬಂದು ಧರಣಿಸತ್ಯಾಗ್ರಹ ನಡೆಸಿದರು. ಕಚೇರಿಯ ಕೆಲಸ ಕಾರ್ಯಗಳು ಸ್ಥಗಿತಗೊಂಡಿತ್ತು. ನಂತರ ನಡೆದ ಸಭೆಯಲ್ಲಿ ಕಾ॥ನಿತ್ಯಾನಂದ ಸ್ವಾಮಿ ಕಾ.ಎನ್.ಜಿ.ಪಠಾಣ, ಕಾ.ಡಿ ಜಿ.ಜೋಸಿ ಮತ್ತು ಕಾ.ಸೈಯದ್ ಸಾಬ್ ಮಾತನಾಡಿ ಜನ ವಿರೋಧಿ ಜನತಾ ಪಕ್ಷದ ಸರ್ಕಾರದ ನೀತಿಯನ್ನು ಖಂಡಿಸಿದರು.

ರಾಣೀ ಬೆನ್ನೂರು

ಸಿ.ಪಿ.ಐ.[ಎಂ]ನ ರಾಣೀ ಬೆನ್ನೂರು ಶಾಖೆಯ ನೇತೃತ್ವದಲ್ಲಿ ಜುಲೈ 17 ರಂದು ವಿದ್ಯುತ್ ದರ ಏರಿಕೆ ಪ್ರತಿಭಟಿಸಿ ಕೆ.ಇ.ಬಿ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಯಿತು. ಪಕ್ಷದ ಧ್ವಜಗಳನ್ನು ಹಿಡಿದು ಮೆರವಣಿಗೆ ಹೊರಟ ಸತ್ಯಾಗ್ರಹಿಗಳು ತಹಸೀಲದಾರರಿಗೆ ಮನವಿ ಸಲ್ಲಿಸಿ ನಂತರ ಕೆ.ಇ.ಬಿ ಕಚೇರಿಗೆ ಬಂದು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿದರು. ನಂತರ ನಡೆದ ಬಹಿರಂಗಸಭೆಯನ್ನುದ್ದೇಶಿಸಿ ಕಾ:ಎಸ್ ಎಫ್.ಕ್ಯಾದಿಗಿ ಕಾ.ಬಾಬುಸಾಬತಟಗ್ಯಾರ್ ಮಾತನಾಡಿದರು. ಕಾರ್ಯಕ್ರಮದ ಮುಖಂಡತ್ವವನ್ನು ಸಂಗಾತಿಗಳಾದ ನಿಂಗಪ್ಪವಿಭೂತಿ, ಬಸವರಾಜಅತಡಕರ ನಜೀರ್‌ಸಾಬ ಮಾಲ್ದಾರ,ಬಾಬನ್ ಕರಜಗಿ ವಹಿಸಿದ್ದರು.

ಧಾರವಾಡ

ಸಿ.ಪಿ.ಐ. (ಎಂ) ಧಾರವಾಡ ನಗರ ಘಟಕದ ನೇತೃತ್ವದಲ್ಲಿ ಜುಲೈ 17 ರಂದು ವಿದ್ಯಾಗಿರಿ ಬಳಿಯಿರುವ ಕೆ.ಇ.ಬಿ ಕಚೇರಿ ಎದುರು ಧರಣಿ ಮುಷ್ಕರ ನಡೆಯಿತು. ಗಣನೀಯ ಸಂಖ್ಯೆಯಲ್ಲಿ ಮಹಿಳೆಯರೂ ಭಾಗವಹಿಸಿದ್ದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಕಾ.ಎಂ.ಬಿ. ಕಟ್ಟಿ ಕಾ. ಎಸ್.ಆರ್. ಪರಪ್ಪನವರ ಕಾ. ರವಿ ಪಾಟೀಲ್ ಮಾತನಾಡಿ ಬೆಲೆ ಏರಿಕೆ ವಿರುದ್ಧದ ಹೋರಾಟದಲ್ಲಿ ಸಾರ್ವಜನಿಕರು ಸಕ್ರೀಯವಾಗಿ ಭಾಗವಹಿಸಬೇಕೆಂದು ಕರೆಯಿತ್ತರು.

ಡಿ ವೈ.ಎಫ್.ಐ.ನ ನೇತೃತ್ವದಲ್ಲಿ ರಜತಗಿರಿಯಲ್ಲಿರುವ ಕೆ.ಇ ಬಿ. ಕಚೇರಿ ಎದುರು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಧರಣಿ ಮುಷ್ಕರ ನಡೆಸಲಾಯಿತು. ಕೆ. ಇ. ಬಿ. ಅಧಿಕಾರಿಗಳಿಗೆ ಮನವಿ ನೀಡಲಾಯಿತು. ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಸಂಗಾತಿಗಳಾದ ಕೃಷ್ಣ ಕಟ್ಟಿ, ಚನ್ನಬಸಣ್ಣ, ಕರಡೆಣ್ಣನವರು ಮಾತನಾಡಿ ವಿದ್ಯುತ್ ದರ ಏರಿಕೆಯನ್ನು ಸರ್ಕಾರ ಕೂಡಲೇ ಇಳಿಸಬೇಕೆಂದು ಒತ್ತಾಯಿಸಿದರು.

ಪಕ್ಷದ ಅಂತರಿಕ ಪ್ರಜಾಸತ್ತೆ

[5ನೇ ಪುಟದಿಂದ]

ಸಮಿತಿಗೆ ಇರುವಂತೆಯೇ ಕೆಳ ಸಮಿತಿಗಳೂ ಹಾಗೂ ಪ್ರತಿಸಾಧಾರಣ ಸದಸ್ಯನಿಗೂ ಜವಾಬ್ದಾರಿಇದೆ.ಅದಕ್ಕಾಗಿಯೇ ನೀವು ಸದಸ್ಯರಾಗಿರುವ ಘಟಕದಲ್ಲಿ ಮೇಲಿನಯಾರೇ ನಾಯಕರೂ ಹಾಗೂ ಸಮಿತಿಗಳನ್ನು ವಿಮರ್ಶಿಸಲು ಪಕ್ಷದ ಎಲ್ಲಾ ಸದಸ್ಯರಿಗೂ ಹಕ್ಕಿದೆ ಎಂದು ಪಕ್ಷದ ಸಂವಿಧಾನದಲ್ಲಿ ಸ್ಪಷ್ಟವಾಗಿ ನಮೂದಿಸಿರುವುದು. ಪಕ್ಷದ ಅಂತರಿಕ ಪ್ರಜಾಪ್ರಭುತ್ವಕ್ಕಿರುವ ಹಕ್ಕಿಗೆಮಾನ್ಯತೆ ನೀಡಿವುದು ಆದರ ಮೇಲೆ ಬರುವ ಆಕ್ರಮಣಗಳೆಲ್ಲವನ್ನು ಎದುರಿಸುವುದು ಇವೆಲ್ಲಾ ಪಕ್ಷದ ಮೇಲಿ ಘಟಕಗಳ ಜವಾಬ್ದಾರಿ ಎಂದು ಪಕ್ಷದ ಸಂವಿಧಾನದಲ್ಲಿ ಸೇರಿಸಿದೆ.

ಕೆಳ ಘಟಕಗಳು ಹಾಗೂ ಮೇಲ್ ಘಟಕಗಳ ನಡುವೆ ನಡೆಯುವ ನಿರಂತರ ಅಭಿಪ್ರಾಯ ವಿನಿಮಯ, ಮಾರ್ಕ್ಸ್‌ವಾದಿ ಲೆನಿನ್‌ವಾದಿ ಕಣ್ಣೋಟದಲ್ಲಿ ಸಮಸ್ಯೆಗಳನ್ನು ನೋಡಿ ಪರಿಹಾರಗಳನ್ನು ಕಾಣುವುದೆ. ಇಡೀಯಾಗಿ ಪಕ್ಷಕ್ಕೆ ಬಲ ನೀಡುವುದು.

ಅದಕ್ಕಾಗಿಯೇ ಎರಡನೇ ಪ್ರಶ್ನೆ ಹೇಳುವಂತೆ ಮೇಲಿನ ತೀರ್ಮಾನಗಳನ್ನು ಜಾರಿಮಾಡುವ ಘಟಕಗಳಾಗಿ ಕೆಳ ಘಟಕಗಳು ವರ್ತಿಸಬಾರದು. 1978ರಲ್ಲಿ ಸಾಲ್ಕಿಯಾಪ್ಲೀನಂನಲ್ಲಿ ಈ ವಿಷಯವನ್ನು ವಿವರಿಸಲಾಗಿದೆ.

ಅದು ಎಷ್ಟರ ಮಟ್ಟಿಗೆ ಜಾರಿಯಾಗಿದೆಯೆಂದು ಪರಿಶೀಲನೆ ಮಾಡಲು ಕೇಂದ್ರ ಸಮಿತಿಯು ಸೇರಿದಂತೆ ಎಲ್ಲಾ ಮೇಲ್ಸಮಿತಿಗಳಿಗೆ ಹೊಣೆಇದೆ. ಪಕ್ಷದ ಮಹಾಧಿವೇಶನಗಳಲ್ಲಿ ಮಂಡಿಸುವ ರಾಜಕೀಯ ಸಂಘಟನಾವರದಿಗಳಲ್ಲಿ ಇದನ್ನು ಪರಿಶೀಲಿಸುತ್ತಾ ಬರಲಾಗಿದೆ. ಈ ಪ್ರಶ್ನೆಯನ್ನು ಕೇಳಿದವರು ಮಾಡಿರುವ ಟೀಕೆ ತಪ್ಪಾದದ್ದೇನಲ್ಲ. 12ನೇ ಮಹಾಧಿವೇಶನ ಅಂಗೀಕರಿಸಿದ ಸಂಘಟನಾ ವರದಿ ಈ ಸತ್ಯವನ್ನು ಬಹಿರಂಗವಾಗಿಸಾರಿದೆ. ಅಲ್ಲಿಂದ ಕೇಂದ್ರ ಸಮಿತಿ ಈ ಪ್ರಶ್ನೆಯನ್ನು ಚರ್ಚಿಸುತ್ತಲೇಇದೆ. ಇದರಿಂದಾಗಿ ಬಹಳ ಅಲ್ಲದಿದ್ದರೂ ಕೆಲ ಬೆಳವಣಿಗೆ ಸಂಭವಿಸಿದೆ. ●

ಕೈಗಾರಿಕಾ ಬಿಕ್ಕಟ್ಟು ಕಾರ್ಮಿಕ ಚಳುವಳಿಗಳು

(2ನೇ ಪುಟದಿಂದ)

ಎಂದು ಸಿದ್ಧಪಡಿಸಿಲಷ್ಟೇ ಇವನ್ನು ಉಲ್ಲೇಖಿಸಿದ್ದೇನೆ. ಪ್ರತಿಯೊಂದು ಕಾರ್ಖಾನೆಯ ಕಾರ್ಮಿಕರೂ ತನ್ನ ಮಾಲೀಕನೇ ಅತಿ ದುಷ್ಟ ಎನ್ನುತ್ತಾರೆ. ನಮ್ಮ ಪ್ರಕಾರ ಮತ್ತು ಯಾವ ಬಂಡವಾಳಶಾಹಿಯೂ ಇನ್ನೊಬ್ಬ ಬಂಡವಾಳಶಾಹಿಗಿಂತ ಹೆಚ್ಚು ದುಷ್ಟನಲ್ಲ. ತನ್ನ ಎಲ್ಲರ ಮಾಲೀಕರೂ ದುಷ್ಟರೆಂದು ಕಾರ್ಮಿಕರೆಲ್ಲಾ ಒಟ್ಟಾಗಿ ತೀರ್ಮಾನಕ್ಕೆ ಬರಬಹುದು. ನಮಗೆ ಬೇಕಾಗಿರುವುದು ಒಂದು ವರ್ಗ ನಿಲುವೆಯೇ ಹೊರತು ಯಾವುದೋ ಒಬ್ಬ ಮಾಲಿಕನನ್ನಷ್ಟೇ ವಿರೋಧಿಸುವುದು ಅಲ್ಲ. ಅಂದರೆ ಒಂದು ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ನಾವು ಹೋರಾಟಗಳನ್ನು ನಡೆಸುವುದು ಸಾಧ್ಯವಿಲ್ಲ ಎಂದು ಇದರ ಅರ್ಥವಲ್ಲವೆಂದು ಮತ್ತೊಮ್ಮೆ ಹೇಳಬೇಕಾಗುತ್ತದೆ. ವಾಸ್ತವವಾಗಿ ಬಿಕ್ಕಟ್ಟಿನ ಸಮಯದಲ್ಲೇ ಹೋರಾಟಗಳು ಚಿಮ್ಮಿ ಬರುವುದು. ಮತ್ತು ಕ್ರಾಂತಿಕಾರೀ ಸನ್ನಿವೇಶ ಮೂಡಿ ಬರುವುದು. ಆದರೆ ವಸ್ತುಸ್ಥಿತಿ ಎಷ್ಟೇ ಅನುಕೂಲಕರ ವಿದ್ದರೂಕ್ರಾಂತಿ ಸಂಭವಿಸಬೇಕಾದರೆ ವ್ಯಕ್ತಿನಿಷ್ಟ ಅಂಶಗಳು ಕೂಡಾ ಅನುಕೂಲವಾಗಿರಬೇಕು. ಕಾರ್ಮಿಕ ವರ್ಗದ ಪ್ರಜ್ಞೆ ಮತ್ತು ಸಂಘಟನೆಯ ಮಟ್ಟ ಎತ್ತರಿಸಬೇಕು, ಇದಕ್ಕಾ, ಮಿಗಿಲಾಗ ಉಕ್ಕಿನ ಶಿಸ್ತು ಹೊಂದಿದ ಕಾರ್ಮಿಕ ವರ್ಗದ ಪಕ್ಷ ಕಟ್ಟ ಕಾರ್ಮಿಕವರ್ಗ ಮುಂಚೂಣಿಯ ಪಾತ್ರವಹಿಸುವಂತೆ, ರೈತಾಪಿ ವರ್ಗದೊಂದಿಗೆ ತಮ್ಮ ಸಂಬಂಧಗಳನ್ನು ಸ್ಥಾಪಿಸಿರುವಂತೆ ಮಾಡಬೇಕು. ಈ ಎಲ್ಲಾ ಬೆಳವಣಿಗೆಗಳೊಂದಿಗೆ ಸಂಬಂಧ ಸಾಧಿಸಿಕೊಳ್ಳದ ಪ್ರತ್ಯೇಕವಾದ ಬಿಡಿ ಬಿಡಿ ಹೋರಾಟ ಅನಪೇಕ್ಷಣೀಯ. ಇತರರಿಂದ ದೂರವಾಗಿ, ಕೆಲವೊಮ್ಮೆ ತನ್ನ ಸ್ವಂತ ಕಾರ್ಖಾನೆಯ ಕಾರ್ಮಿಕರ ಮಿತಿಯೊಳಗಷ್ಟೇ ಮಾತನಾಡುತ್ತಾ ಇತರ ಕಾರ್ಮಿಕರೊಂದಿಗೆ ಸ್ಪರ್ಧೆಗಿಳಿದು ತಮ್ಮ ಕಾರ್ಖಾನೆಯಲ್ಲಿ ಹೋರಾಟ ಆರಂಭಿಸುವುದಂತೂ ಅತ್ಯಂತ ಅನಪೇಕ್ಷಣೀಯ, ಇದರಿಂದ ಕಾರ್ಖಾನೆ ಪ್ರಜ್ಞೆ ಅತ್ಯಂತ ಕೀಳುಮಟ್ಟಕ್ಕೆ ಇಳಿಯುತ್ತದೆ. ಮತ್ತು ಅದು ಕ್ರಾಂತಿಕಾರೀ ವರ್ಗ ಮೂಡುವುದನ್ನು ತಡೆಯುತ್ತದೆ. ಪಕ್ಷದ ಹನ್ನೆರಡನೇ ಮಹಾಧಿವೇಶನದ ರಾಜಕೀಯ ವರದಿಯ ಕಾರ್ಮಿಕರಂಗ ಕುರಿತಾದ ಭಾಗ ಈ ದೌರ್ಬಲ್ಯವನೇ ನಿರ್ದಿಷ್ಟವಾಗಿ ತೋರಿಸಿಕೊಟ್ಟಿದೆ. ಬಂಡವಾಳಶಾಹೀ ವರ್ಗ ಬಂಡವಾಳಶಾಹೀ ಬಿಕ್ಕಟ್ಟಿನ ಹೊರೆಯನ್ನು ಕಾರ್ಮಿಕ ವರ್ಗದ ಮೇಲೆ ವರ್ಗಾಯಿಸುವಾಗ, ಭಾರತದ ಕಾರ್ಮಿಕ ವರ್ಗ ಸಮಸ್ತ ಬಂಡವಾಳಶಾಹೀ ವರ್ಗದ ವಿರುದ್ಧ ಹೋರಾಟ ಆರಂಭಿಸಿದರತೆ ತಡೆಹಿಡಿದ ಅಂಶವೆಂದರೆ ಅದರಲ್ಲಿನ ಈ ವರ್ಗ ಪ್ರಜ್ಞೆಯ ಅಭಾವವೇ ಆದರೆ ಅದೇ ವರದಿಯಲ್ಲಿ ರಿಟ್ರೆಂಚ್‌ಮೆಂಟ್, ಲಾಕೌಟ್ ವಿರುದ್ಧ ಹಲವು ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳು ತೀವ್ರ ಹೋರಾಟ ನಡೆಸಿದವು ಎಂಬುದನ್ನು ಗಮನಿಸಲಾಗಿದೆ. ಕಾರ್ಮಿಕರು ಬಿಕ್ಕಟ್ಟಿನ ಗಂಭೀರತೆಯನ್ನು ಅರ್ಥಮಾಡಿಕೊಳ್ಳಲಿಲ್ಲ. ಕೇವಲ ಬೇರೆ ಬೇರೆಯಾಗಿ ಅಲ್ಲಿ ಇಲ್ಲಿ ಕಾರ್ಖಾನೆಗಳಲ್ಲಿ ರಕ್ಷಣಾತ್ಮಕ ಹೋರಾಟವನ್ನಷ್ಟೇ ಮಾಡಲು ಸಾಧ್ಯವಾಯಿತು ಎನ್ನುವ ಸಂಗತಿ ಅವರಲ್ಲಿ ವರ್ಗ ಪ್ರಜ್ಞೆಯ ಅಭಾವವನ್ನು, ಮತ್ತು ಅದಿನ್ನೂ ಕಾರ್ಖಾನೆ ಪ್ರಜ್ಞೆಯ ಮಟ್ಟದಲ್ಲೇ ಉಳಿದಿರುವುದನ್ನು ತೋರಿಸುತ್ತದೆ. ಪಕ್ಷದ ಮಹಾಧಿವೇಶನವೇ ಕಾರ್ಮಿಕ ಆಂದೋಲನ ಕಾರ್ಖಾನೆ ಪ್ರಜ್ಞೆಯ ಮಟ್ಟದಲ್ಲೇ ಸೀಮಿತಗೊಂಡಿರುವ ದೌರ್ಬಲ್ಯವನ್ನು ಎತ್ತಿ ತೋರಿಸುವಾಗ, ನಮ್ಮ ಸಂಗಾತಿಗಳು, ಒಂದು ಕಾರ್ಖಾನೆಯ ಹೆಸರಿನಲ್ಲಿ ಪ್ರತ್ಯೇಕ ಭಾವನೆಯನ್ನು ಪೋಷಿಸುವುದು ಪಕ್ಷಕ್ಕೆ ಮತ್ತು ಕ್ರಾಂತಿ ಕಾರೀ ಗುರಿ ಸಾಧನೆಗೆ ತಂಬಾ ನಷ್ಟ ಉಂಟು ಮಾಡುತ್ತದೆ. ಇಂತಹ ಸಂಗಾತಿಗಳು ತಮ್ಮ ವೈಯಕ್ತಿಕ ಹಿತಾಸಕ್ತಿ ಕಾದುಕೊಳ್ಳಲು ಪ್ರಯತ್ನಿಸುವ ಮಟ್ಟಿಗೆ ಸೋಗು ಹಾಕುವವರು ಮತ್ತು ತಪ್ಪು ಮಾರ್ಗದಲ್ಲಿಪ್ರಾಮಾಣಿಕವಾದನಂಬಿಕೆ ಇಟ್ಟಿರುವ ಮಟ್ಟಿಗೆ ಅಮಾಯಕರಂತೆ ಕಾಣುವ ಸೋಗಿನವರ ಬಲೆಗೆ ಅರಿವಿಲ್ಲದೆಯೇ ಬೀಳುತ್ತಾರೆ.

ಪ್ರಜ್ಞೆಯ ಮಟ್ಟ ಎತ್ತರಿಸಬೇಕು

ಸಿ.ಐ.ಟಿ.ಯು.ನ ಆರನೇ ಅಖಿಲ ಭಾರತ ಸಮ್ಮೇಳನ (ಮುಂಬೈ-ಮೇ 1987) ಕಾರ್ಮಿಕ ಆಂದೋಲನದ ಸ್ವರೂಪವನ್ನು ಬದಲಿಸಲು ಗಂಭೀರ ಪ್ರಯತ್ನ ನಡೆಸಿದೆ. ಈ ಸಮ್ಮೇಳನ ವಿಶ್ವಶಾಂತಿಗಾಗಿ, ಕಾರ್ಮಿಕ ಸಂಘಟನೆಯ ಐಕ್ಯತೆಗಾಗಿ, ಕೈಗಾರಿಕಾ ಒಕ್ಕೂಟಗಳನ್ನು ಪೂರ್ಣ ಸದಸ್ಯರಾಗಿ ಸೇರಿಸಿಕೊಂಡು ಎನ್.ಸಿ.ಸಿ.ಯನ್ನು ವಿಸ್ತರಿಸಲು, ಒಂದು ಮಹಾ ಒಕ್ಕೂಟ (ಕಾನ್ಫೆಡರೇಷನ್) ರಚನೆಗಾಗಿ, ನಿರುದ್ಯೋಗದ ವಿರುದ್ಧ,ದುಡಿಯುವ ಮಹಿಳೆಯರ ಹಕ್ಕುಗಳಿಗಾಗಿ,ಕಾಂಟ್ರಾಕ್ಟ್, ಕ್ಯಾಶುವಲ್, ಯುವ ಕಾರ್ಮಿಕರು, ಅಸಂಘಟಿತ ಕೆಲಸಗಾರರ ಹಿತಾಸಕ್ತಿ ರಕ್ಷಣೆಗಾಗಿ, ಹರಿಜನ ಮುಸ್ಲಿಂ ಮತ್ತಿತರ ಅಲ್ಪ ಸಂಖ್ಯಾತರ ಹಿತರಕ್ಷಣೆಗಾಗಿ ಹೋರಾಡುವ ಅಗತ್ಯವನ್ನು ಒತ್ತಿ ಹೇಳಿದೆ. ನಮ್ಮ ಸದಸ್ಯರ ಪ್ರಜ್ಞೆಯ ಮಟ್ಟವನ್ನು ಉತ್ತರಿಸುವ ಮೂಲಕವಷ್ಟೇ ಇವನ್ನೆಲ್ಲಾ ಮಾಡಲು ಸಾಧ್ಯ. ಈ ದಾರಿಯನ್ನು ವಿರೋಧಿಸುವ ಎಲ್ಲಾ ಶಕ್ತಿಗಳ ಪ್ರತಿರೋಧವನ್ನು ಮೀರಿನಿಂತು ನಮ್ಮ ಸದಸ್ಯರ ಪ್ರಜ್ಞೆಯ ಮಟ್ಟವನ್ನು ಎತ್ತರಿಸಬೇಕಾಗಿದೆ.

ಆರನೇ ಅಖಿಲ ಭಾರತ ಸಿ.ಐ.ಟಿ.ಯು. ಸಮ್ಮೇಳನ ಹಾಕಿ ಕೊಟ್ಟ ಮೇಲೆ ಹೇಳಿದ ಕಾರ್ಯಕ್ರಮ ಕ್ರಾಂತಿಕಾರೀ ತಿರುಳನ್ನು ಹೊಂದಿರುವ ಕಾರ್ಯಕ್ರಮ ಎಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗುವ ಸಂಗಾತಿಗಳು, ಇಂತಹದೊಂದು ಕಾರ್ಯಕ್ರಮವನ್ನು ಜಾರಿಗೊಳಿಸುವುದು ಚಾರಿತ್ರಿಕ ಕರ್ತವ್ಯ. ○

ಮೂರು ತುರ್ತು ಸಮಸ್ಯೆಗಳು

(4ನೇ ಪುಟದಿಂದ)

ದೆಯೇ ಅವರು ಅದಕ್ಕೆ ಸಂಬಂಧಿಸಿದ ಎಲ್ಲಾ ಹಕ್ಕುಗಳನ್ನು ಪಡೆದಿದ್ದಾರೆಯೆ ಎಂಬುದು ಮತ್ತೊಂದು ಪ್ರಶ್ನೆ.4,85,-446 ಮಾಜಿ ಗೇಣಿದಾರರಿಗೆ ಭೂಮಿ ಹಕ್ಕು ನೀಡಲಾಗಿದೆ ಎಂದು ಹೇಳುವ ರಾಜ್ಯ ಸರ್ಕಾರ 2,47,608 ಗೇಣಿದಾರರು ಭೂ ಅಭಿವೃದ್ಧಿ ಬ್ಯಾಂಕ್‌ನಿಂದ 27.24 ಕೋಟಿ ರೂಗಳನ್ನು ಸಾಲ ತೆಗೆದುಕೊಂಡು ತೀರಿಸಿದ ಮೇಲೆ ಜನತಾ ಸರ್ಕಾರ 17.10.84ರಲ್ಲಿ 10 ಎಕರೆ ಡಿ ವರ್ಗದ ಭೂಮಿಗೆ ಸಮಾನವಾದ ಭೂಮಿಗೆ ಸಂಬಂಧಿಸಿದ ಕಂತುಗಳ ಬಗ್ಗೆ ವಿನಾಯತಿ ನೀಡಿತು. ಈ ಆಜ್ಞೆಯಲ್ಲಿ ಭೂ ಅಭಿವೃದ್ಧಿ ಬ್ಯಾಂಕ್ ಹಾಗೂ ಇತರ ಬ್ಯಾಂಕ್‌ಗಳಿಂದ ಸಾಲ ಪಡೆದು ಎಲ್ಲಾ ಕಂತುಗಳನ್ನು ಒಮ್ಮೆಗೇ ತುಂಬಿದ ತಪ್ಪಿಗೆ ಈ ರೈತರು ಸರಕಾರ ನೀಡಿದ ಸವಲತ್ತಿನಿಂದ ವಂಚಿತರಾಗಿದ್ದಾರೆ. ಅವರ ತಲೆಯ ಮೇಲೆ ಸಾಲದ ಹೊರೆ ಏರಿ ಕುಳಿತಿದೆ ಅದನ್ನು ಪ್ರಾಥಮಿಕ ಅಭಿವೃದ್ಧಿ ಬ್ಯಾಂಕ್‌ನ ತಗಾದೆ ನೋಟಿಸುಗಳು ನೆನಪಿಸುತ್ತಿವೆ. ಮನೆಯ ಪಾತ್ರೆ ಪಡಗ ಇತರ ಚರ ಸ್ವತ್ತಿಗೆ ಕೊನೆಗೆ ಭೂಮಿಗೆ ಎಂದು ವಕ್ರ ಬರುವುದೋ ಎಂಬ ಭಯ ಗೇಣಿ ರೈತರನ್ನು ಕಾಡುತ್ತಿದೆ. ಇದರ ಜೊತೆಗೆ 'ಡಿ' ವರ್ಗದ ಭೂಮಿಗೆ ಮಾತ್ರ ಸೌಲಭ್ಯ ಏಕೆ ? 10 ಎಕರೆಗೆ ಸೀಮಿತಗೊಳಿಸಿದ್ದೇಕೆ ? ಇದಕ್ಕೆ ಯಾವ ಸಕಾರಣ ಆಧಾರವಿದೆ.

ಗೇಣಿ ರೈತರು ಹಲವಾರು ವರ್ಷಗಳಿಂದ ಕೆಲವೊಮ್ಮೆ ತಲತಲಾಂತರಗಳಿಂದ ಭೂ ಒಡೆಯರಿಗೆ ತಮ್ಮ ರಕ್ತ ಬಸಿದು ಕೊಟ್ಟ ಗೇಣಿ ಆಭೂಮಿಯ ಬೆಲೆಯ ನೂರಾರು ಪಟ್ಟು ತೆತ್ತಂತೆ ಆಗಿಲ್ಲವೇ ? ಗೇಣಿಗೆ ಭೂಮಿ ನೀಡಿದವರು ಅಶಕ್ತರು, ಮಹಿಳೆಯರು, ಸಣ್ಣ ಸಂಬಳದ ನೌಕರರಾದರೆ ಬೇರೆ ವಿಚಾರ. ಆದರೆ ಭೂಮಿಯನ್ನು ಪಡೆದ ಗೇಣಿ ರೈತ ಆ ಭೂಮಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ ತನ್ನಲ್ಲಿಲ್ಲದ ಕೃಷಿ ಉಪಕರಣಗಳನ್ನು ಕೊಳ್ಳುವುದಕ್ಕೆ ಹಣ ಹೂಡುವುದಕ್ಕೆ ಬದಲಾಗಿ ಆ ಭೂಮಿಯ ಒಡೆಯ ಭೂಮಾಲಿಕನ ಸಂಪತ್ತನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ಕಾರಣವಾದರೆ ಗೇಣಿದಾರರ ಅಭಿವೃದ್ಧಿಯಾಗುತ್ತದೆಯೇ ಅಥವಾ ಕೃಷಿ ಅಭಿವೃದ್ಧಿಯಾದರೂ ಆಗಲು ಸಾಧ್ಯವೇ ?

ಗೇಣಿದಾರನಿಗೆ ಇನ್ನು ಕೈಗೆ ಸಿಗದ ಭೂಮಿಯನ್ನು ಮತ್ತೆ ಗೇಣಿ ರೈತರಿಂದ ಕಿತ್ತುಕೊಳ್ಳುವ ಯೋಜನೆಯನ್ನೂ ಮಾಡುತ್ತಿದೆ. ಸರಕಾರ, ನಗರಾಸ್ತಿ ಮಿತಿಯ ಹೆಸರಿನಲ್ಲಿ ಸರಕಾರ ಭೂ ಸುಧಾರಣಾ ಕಾನೂನಿನಡಿಯಲ್ಲಿ ಭೂಮಿ ಪಡೆದ ರೈತರ ಈ ಸಂಕಷ್ಟಗಳನ್ನೆಲ್ಲಾ ಪರಿಹರಿಸಬೇಕಾದುದ್ದು ರಾಜ್ಯ ಸರ್ಕಾರವೇ ಆದ್ದರಿಂದ ಸಹಕಾರಿ ಸಂಸ್ಥೆಗಳಿಂದ ಪಡೆದ ಸಾಲವನ್ನು ರದ್ದು ಮಾಡುವ, ಎಲ್ಲಾ ಗೇಣಿದಾರರಿಗೆ ಮುಫತ್ತಾಗಿ ಭೂಮಿ ನೀಡುವ ನಗರಾಸ್ತಿ ಮಿತಿ ಕಾಯಿದೆಯಲ್ಲಿ ಗೇಣಿ ರೈತರಿಗೆ ವಿನಾಯಿತಿ ನೀಡುವ ಕೆಲಸವನ್ನು ರಾಜ್ಯ ಸರ್ಕಾರ ಈ ಕೂಡಲೆ ಕೈಗೊಳ್ಳಬೇಕು ಎಂಬ ಈ ಘೋಷಣೆಗಳು ರಾಜ್ಯದೆಲ್ಲೆಡೆಯಲ್ಲಿ ಧ್ವನಿಸಲಿ.

ಭೂಮಿ ಪ್ರಶ್ನೆ ನಮ್ಮ ಕಾರ್ಷಿಕ ಪ್ರಶ್ನೆಯ ಕೇಂದ್ರ ಪ್ರಶ್ನೆ ಈ ಪ್ರಶ್ನೆಗೆ ಸಂಬಂಧಿಸಿದ ತರ್ತು ಪ್ರಶ್ನೆಗಳನ್ನು ಸೆಪ್ಟೆಂಬರ್ ರೈತ ಚಳುವಳಿ ಎತ್ತಬೇಕು. ಇವುಗಳ ಜೊತೆ ಈ ಭೂಮಿಯನ್ನು ಉಳಿಸಿಕೊಳ್ಳಬೇಕಾದರೆ ರೈತನ ಫಸಲಿಗೆ ತಕ್ಕ ಬೆಲೆ, ಕೃಷಿ ಕಾರ್ಮಿಕನಿಗೆ ಕೂಲಿ ಕರ ಭಾರವನ್ನು ತೆಗೆದು ಹಾಕುವುದು, ಅಗ್ಗದ ಸಾಲ ಇವೆಲ್ಲವನ್ನೂ ಚಳುವಳಿಧ್ವನಿಸಬೇಕು. ○

ಮೊಜಾಂಬಿಕ್‌ನ ಅಧ್ಯಕ್ಷರನ್ನು ಕೊಂದವರು ಯಾರು ?

ಕಳೆದ ವರ್ಷ ಅಕ್ಟೋಬರ್ 16ರಂದು ರಾತ್ರಿ ಮೊಜಾಂಬಿಕ್‌ನ ಅಧ್ಯಕ್ಷ ಸಮೋರಾ ಮಶೆಲ್ ಪ್ರಯಾಣಿಸುತ್ತಿದ್ದ ಸೋವಿಯತ್ ನಿರ್ಮಿತ TU 134 A ವಿಮಾನ ದಕ್ಷಿಣ ಆಫ್ರಿಕದ ಪ್ರದೇಶದಲ್ಲಿ ಪರ್ವತವೊಂದಕ್ಕೆ ಡಿಕ್ಕಿ ಹೊಡೆದು ಅಪಘಾತಕ್ಕೀಡಾಯಿತು. ಅಧ್ಯಕ್ಷ ಸಮೋರಾ ಮಶೆಲ್ ಅವರ ಸಹ ಪ್ರಯಾಣಿಕರು ಮತ್ತು ವಿಮಾನದ ಸಿಬ್ಬಂದಿ ಈ ದಾರುಣ ಅಪಘಾತದಲ್ಲಿ ಮೃತಪಟ್ಟರು.

ಅಂತರಾಷ್ಟ್ರೀಯ ವಿಮಾನ ಸಾರಿಗೆಯ ನಿಯಮಗಳಂತೆ ದ. ಆಫ್ರಿಕಾ ಸರ್ಕಾರ ಈ ಅಪಘಾತದ ಕುರಿತು ತನಿಖೆ ನಡೆಸಬೇಕಾಯಿತು. ನಿಯಮ ಪ್ರಕಾರ ವಿಮಾನ ನಿರ್ಮಿಸಿದ್ದ ಸೋವಿಯತ್ ಒಕ್ಕೂಟ ಮತ್ತು ಮೊಜಾಂಬಿಕ್ ಸರ್ಕಾರಗಳೂ ಈ ತನಿಖೆಯಲ್ಲಿ ಭಾಗವಹಿಸಿದವು.

ಜಾಂಬಿಯದ ಎಂಬಾಲಾ ನಿಲ್ದಾಣದಿಂದ ಹೊರಟ ವಿಮಾನ ಮೊಜಾಂಬಿಕ್‌ನ ಮಾಪುಟಾ ನಿಲ್ದಾಣವನ್ನು ಸಮೀಪಿಸುತ್ತಿರುವಾಗ ತಪ್ಪು ರೇಡಿಯೋ ಸಂಕೇತವೊಂದನ್ನು ಅನುಸರಿಸಿ 37 ಡಿಗ್ರಿಗಳಷ್ಟು ಬಲಕ್ಕೆ ತಿರುಗಿ ದಾರಿ ತಪ್ಪಿತೆಂದೂ, ಆ ಬಳಿಕ ಪರ್ವತಕ್ಕೆ ಡಿಕ್ಕಿ ಹೊಡೆಯಿತ್ತೆಂದೂ ಈ ತನಿಖೆಯಿಂದ ಗೊತ್ತಾಗಿದೆ. ಆದರೆ ಈ ಸುಳ್ಳು ರೇಡಿಯೋ ಸಂಕೇತವನ್ನು ನೀಡಿದವರು ಯಾರು ? ಅದು ಎಲ್ಲಿಂದ ಬಂತು ? ವಿಚಾರಣೆಯಲ್ಲಿ ಈ ಪ್ರಶ್ನೆ ಬಂದಾಗ ದ. ಆಫ್ರಿಕಾ ಸರ್ಕಾರದ ಪ್ರತಿನಿಧಿಗಳು ವಿಚಾರಣೆಯನ್ನು ಹಠಾತ್ತಾಗಿ ನಿಲ್ಲಿಸಿ ಸೋವಿಯತ್ ಒಕ್ಕೂಟದಿಂದ ವಾಪಸಾದರು.

ಸೋವಿಯತ್ ವಿಮಾನಯಾನ ತಜ್ಞರು ಮತ್ತು ಮೊಜಾಂಬಿಕ್ ಸರ್ಕಾರದ ಪ್ರತಿನಿಧಿಗಳು ಈ ತನಿಖೆಯಿಂದ ತೃಪ್ತರಾಗದೆ ಅದನ್ನು ಇನ್ನಷ್ಟು ಆಳವಾಗಿ ನಡೆಸಿದ ಮೇಲೆ ದ. ಆಫ್ರಿಕದ ಕ್ರೂರ ಕೃತ್ಯವೊಂದು ಬೆಳಕಿಗೆ ಬಂದಿದೆ.

ದ. ಆಫ್ರಿಕದ ಪ್ರತಿನಿಧಿಗಳು ಹೇಳಿಕೊಂಡಂತೆ ವಿಮಾನದ ಸಿಬ್ಬಂದಿ ಸ್ವಾಜಿಲ್ಯಾಂಡಿನ ಮಾತ್‌ಸಫಾ ನಿಲ್ದಾಣದ ರೇಡಿಯೋ ತರಂಗಗಳಿಗೆ ತಮ್ಮ ವಿಮಾನದ ಉಪಕರಣಗಳನ್ನು ತಪ್ಪಾಗಿ ತಿರುಗಿಸಿ ಇಟ್ಟಿರಲಿಲ್ಲ. ಮಾತ್‌ಸಫಾ ನಿಲ್ದಾಣದಿಂದ ಪ್ರೇಷಿತವಾದ ರೇಡಿಯೋ ತರಂಗಗಳು ಅಲ್ಲಿಂದ 135 ಕಿ.ಮೀ. ಗಿಂತಲೂ ಹೆಚ್ಚು ದೂರ ಸಾಗಲು ಸಾಧ್ಯವೇ ಇರಲಿಲ್ಲ. ಅಲ್ಲದೆ ಈ ತರಂಗಗಳಿಗೆ ಬಾಂಜೆಗಾರಿಬು ಪರ್ವತಗಳು ತಡೆಯಾಗಿದ್ದವು. ಹಾಗಾಗಿ ಸುಳ್ಳು ರೇಡಿಯೋ ಸಂಕೇತಗಳು ದ. ಆಫ್ರಿಕಾದ ಯಾವುದೋ ಭಾಗದಿಂದಲೇ ಹೊರಟಿರಬೇಕು. ಸಮೋರಾ ಮಶೆಲ್ ಅವರ ವಿಮಾನ ಅಪಘಾತವಾದ ಜಾಗಕ್ಕೆ ಸುಮಾರು 150ಮೀ.ಗಳಷ್ಟು ಹತ್ತಿರದಲ್ಲಿ ಒಂದು ತಾತ್ಕಾಲಿಕ ಸೈನಿಕ ನೆಲೆಯಿದ್ದ ಕುರುಹುಗಳು ಕಂಡು ಬಂದಿವೆ. ಮಶೆಲ್ ಅವರ ವಿಮಾನ ಬಿದ್ದ ಮರು ದಿನವೇ ಈ ಸೈನಿಕ ಶಿಬಿರವನ್ನು ದ. ಆಫ್ರಿಕಾ ಸರ್ಕಾರ ಅಲ್ಲಿಂದ ಕಿತ್ತಿತ್ತು. ಸಮೋರಾ ಮಶೆಲ್ ಅವರ ವಿಮಾನ ಅಪಘಾತವಾದ ಒಂದೇ ಗಂಟೆಯೊಳಗೆ ಇನ್ನೊಂದು ಬೋಯಿಂಗ್ 737 ವಿಮಾನ ಅದೇ ರೀತಿ ಬಲಕ್ಕೆ ತಿರುಗಿ ದಾರಿ ತಪ್ಪಿತ್ತು. ಈ ವಿಮಾನಕ್ಕೂ ಸುಳ್ಳು ರೇಡಿಯೋ ಸಂಕೇತಗಳೇ ದಾರಿ ತೋರಿಸಿದ್ದವು. ಆ ಬಳಿಕ ಅದು ಮಾಪುಟಾ ನಿಲ್ದಾಣ ಕಳುಹಿಸಿದ ಎಚ್ಚರಿಕೆಯ ಸಂಕೇತವನ್ನನುಸರಿಸಿ ಅಪಾಯದಿಂದ ಪಾರಾಯಿತು.

ಈ ಎಲ್ಲಾ ಘಟನೆಗಳ ಹಿನ್ನೆಲೆಯಲ್ಲಿ ದ. ಆಫ್ರಿಕಾ ಸರ್ಕಾರವೇ ಮೊಜಾಂಬಿಕ್‌ನ ಮಾಪುಟಾ ನಿಲ್ದಾಣ ಕಳುಹಿಸುವ ರೇಡಿಯೋ ಸಂಕೇತಗಳ ಪ್ರಬಲವಾದ ತರಂಗಾಂತರವನ್ನು ತಾನೂ ಬಳಸಿ ಸಮೋರಾ ಮಶೆಲ್ ಅವರ ವಿಮಾನ ದಾರಿ ತಪ್ಪಿ ಅಪಘಾತಕ್ಕೀಡಾಗುವಂತೆ ಕ್ರೂರ ಒಳಸಂಚು ನಡೆಸಿದೆಯೆನ್ನುವುದು ಸೋವಿಯತ್ ಪರಿಣತರ ತನಿಖೆಯಿಂದ ಗೊತ್ತಾಗಿದೆ. ಸಮೋರಾ ಮಶೆಲ್ ಅಪಘಾತದಿಂದ ಸತ್ತಿಲ್ಲ; ಅವರ ಕೊಲೆಯಾಗಿದೆ. ಕೊಂದವರು ಯಾರು ಎನ್ನುವುದು ಎಲ್ಲರಿಗೂ ತಿಳಿದಿದೆ. ●

ಮಾಸ್ಕೋದಲ್ಲಿ ಇಳಿದ ವಿಮಾನ ಒನ್ನೆಲಿ

ಕಳೆದ ತಿಂಗಳು ಮಥಾಯಿಸ್ ರಸ್ಟ ಎಂಬ ಹತ್ತೊಂಭತ್ತು ವರ್ಷದ ಹುಡುಗನೊಬ್ಬ ತನ್ನ ಚಿಕ್ಕ ವಿಮಾನದಲ್ಲಿ ಹಾರಿ ಸೋವಿಯೆತ್ ರಾಡಾರ್‌ಗಳ ಕಣ್ಣು ತಪ್ಪಿಸಿ ಮಾಸ್ಕೋದಲ್ಲಿ ಬಂದಿಳಿದ. ಸೋವಿಯತ್ ವಾಯು ಪ್ರದೇಶವನ್ನು ಕಾನೂನು ಬಾಹಿರವಾಗಿ ಉಲ್ಲಂಘಿಸಿ ಮಾಸ್ಕೋಗೆ ಬಂದಿಳಿದ ಈ ಜರ್ಮನ್ ಪೈಲಟ್‌ನ ಕಿಡಿಗೇಡಿತನದ ಹಿಂದೆ ಸಾಕಷ್ಟು ಕುತಂತ್ರವಿದೆಯೆಂದು ತಿಳಿದು ಬಂದಿದೆ. ಸೋವಿಯೆತ್ ಒಕ್ಕೂಟದಲ್ಲಿ ವಿಚಾರಣೆ ಎದುರಿಸುತ್ತಿರುವ ರಸ್ಟ್ ತನ್ನನ್ನು ಈ ಹಾರಾಟಕ್ಕಾಗಿ ತರಬೇತಿಗೊಳಿಸಲಾಗಿತ್ತೆಂದೂ ಅದು ಬರೀ ತಮಾಷೆಗಾಗಿ ಅಲ್ಲವೆಂದೂ ಒಪ್ಪಿಕೊಂಡಿದ್ದಾನೆ. ರಾಡಾರ್‌ಗಳ ಕಣ್ಣು ತಪ್ಪಿಸಿ ವಿಮಾನ ಹಾರಾಟ ನಡೆಸುವುದು ಹೇಗೆಂದು ರಸ್ಟ್‌ಗೆ ಹೇಳಿಕೊಡಲಾಗಿತ್ತು. ಸೋವಿಯೆತ್ ಒಕ್ಕೂಟದ ಭೂಭಾಗದ ನಿಕಟ ಪರಿಚಯ ನೀಡುವ ಸೈನಿಕ ನಕಾಶೆಯೊಂದನ್ನು ಅಮೇರಿಕಾದ ಸೈನ್ಯಾಧಿಕಾರಿಗಳು ರಸ್ಟ್‌ಗೆ ಕೊಟ್ಟಿದರು. ಬೇರೆ ರಾಷ್ಟ್ರದ ವಾಯು ಪ್ರದೇಶವನ್ನು ಅಂತರಾಷ್ಟ್ರೀಯ ಕಾನೂನುಗಳಿಗೆ ವಿರೋಧವಾಗಿ ಉಲ್ಲಂಘಿಸುವುದು ಭೀಕರ ಪರಿಣಾಮಗಳಿಗೆ ಎಡೆ ಮಾಡಿಕೊಡುವುದೆಂಬುದು ಗೊತ್ತಿದ್ದರೂ ಅವನನ್ನು ಇಂತಹ ಅಪಯಕಾರಿ ದುಸ್ಸಾಹಸಕ್ಕೆ ಬಳಸಿಕೊಂಡ ಪ.ಜರ್ಮನಿ ಮತ್ತು ಅಮೇರಿಕಾಗಳು ಅಧಿಕ ಪ್ರಸಂಗತನದ ಕೆಲಸಕ್ಕೆ ಕೈ ಹಾಕಿವೆ ಎಂದಷ್ಟೇ ಹೇಳಬೇಕಾಗಿದೆ.

ಮಾರ್ಕೋಸ್ ಬೆಂಬಲಿಗರ ವಿಫಲ ಸಂಚು.

ಫಿಲಿಪ್ಪೈನ್ಸ್‌ನ ಕೊರಾಜೋನ್ ಅಕ್ವಿನೋ ಸರಕಾರವನ್ನು ಬುಡಮೇಲು ಮಾಡಲು ದೇಶಭ್ರಷ್ಟ ಮಾರ್ಕೋಸ್ ತನ್ನ ಬೆಂಬಲಿಗರ ಮೂಲಕ ನಡೆಸಿದ ವಿಫಲ ಪಿತೂರಿಯೊಂದನ್ನು ಕಳೆದ ವಾರ ಬೆಳಕಿಗೆ ತರಲಾಗಿದೆ. ಮಾರ್ಕೋಸ್ ಬೆಂಬಲಿಗರೆನ್ನಲಾದ ಒಬ್ಬ ಸೈನಾಧಿಕಾರಿ ಮನಿಲಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಕೈವಶಪಡಿಸಿಕೊಂಡು ಪ್ರಯಾಣಿಕರನ್ನು ಒತ್ತೆಸೆರೆಯಲ್ಲಿರಿಸುವ ಸಂಚು ಹೂಡಿದನೆನ್ನುವ ಆರೋಪದ ಮೇಲೆ ಆತನನ್ನು ದಸ್ತಗಿರಿ ಮಾಡಲಾಗಿದೆ. ಇವನಲ್ಲದೆ ಇನ್ನೂ ಹಲವಾರು ಸೈನಿಕ ಅಧಿಕಾರಿಗಳು ಈಗ ವಿಚಾರಣೆಗೆ ಎದುರಿಸುತ್ತಿದ್ದಾರೆ ಅಮೇರಿಕದಲ್ಲಿ ಆಶ್ರಯ ಪಡೆದಿರುವ ಪದಚ್ಯುತ ಅಧ್ಯಕ್ಷ ಮಾರ್ಕೋಸ್ ಅಕ್ವಿನೋ ಸರ್ಕಾರದ ವಿರುದ್ಧ ನಡೆಸುತ್ತಿರುವ ಅನೇಕ ಪಿತೂರಿಗಳಲ್ಲಿ ಇನ್ನೂ ಒಂದು ಇಂತಹ ಪಿತೂರಿಗಳನ್ನು ಇನ್ನು ಮುಂದೆ ಸಹಿಸಲಾಗುವುದಿಲ್ಲವೆಂದೂ ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಗುವುದೆಂದೂ ಅಕ್ವಿನೋ ಸರಕಾರಕ್ಕೆ ನಿಷ್ಠರಾಗಿರುವ ಸೈನಿಕ ಅಧಿಕಾರಿಗಳು ತಿಳಿಸಿದ್ದಾರೆ.

'ಬಾಳೆ ಹಣ್ಣು ಕಿತ್ತಳೆ' ; ಜೋಶುವಾ ಸಾಮ್ಯುವೆಲ್

'ಇರಾನ್-ಗೇಟ್' ಹಗರಣದ ಬಗ್ಗೆ ಅಮೇರಿಕಾದ ಕಾಂಗ್ರೆಸ್‌ನ ವಿಚಾರಣೆ ಎದುರಿಸುತ್ತಿರುವ ಅಧ್ಯಕ್ಷ ರೀಗನ್‌ನ ಮಾಜಿಸಲಹೆಗಾರ ಕರ್ನಲ್‌ನಾರ್ತ್ ಈ ಹಗರಣದಲ್ಲಿ ಬಳಸಲಾಗಿರುವ ಗುಪ್ತನಾಮಗಳ ಅರ್ಥವನ್ನು ಈಗ ಹೊರಗೆಡವಿದ್ದಾರೆ. ಇಡೀ ಪ್ರಕರಣದಲ್ಲಿ ಇಸ್ರೇಲ್‌ನ್ನು 'ಬಾಳೆ ಹಣ್ಣು' ಎಂದೂ ಅಮೇರಿಕವನ್ನು 'ಕಿತ್ತಳೆ' ಎಂದೂ ಹೆಸರಿಸಲಾಗಿತ್ತು. "ಈ ಶರ್ತಗಳು 'ಬಾಳೆಹಣ್ಣು' ಗಳಿಗೆ ಒಪ್ಪಿಗೆಯಾದರೆ 'ಕಿತ್ತಳೆ'ಗಳು ಮುಂದಿನ ಕ್ರಮಕ್ಕೆಗೊಳ್ಳುವವು ಎಂದೂ ಕರ್ನಲ್ ನಾರ್ತ್ ತನ್ನ ಟಿಪ್ಪಣಿ ಪುಸ್ತಕದಲ್ಲಿ ಗುರುತಿಸಿಕೊಂಡಿದ್ದರು. "ಮೊದಲನೇ ಉಪಕ್ರಮದ ಬಗ್ಗೆ 'ಜೋಶುವಾ' ಮತ್ತು 'ಸಾಮ್ಯುವೆಲ್' ಒಪ್ಪಿಕೊಂಡಿದ್ದಾರೆ" ಎಂಬ ಇನ್ನೊಂದು ಟಿಪ್ಪಣಿಯಲ್ಲಿ 'ಜೋಶುವಾ ಎಂದರೆ ಅಧ್ಯಕ್ಷ ರೊನಾಲ್ಡ್ ರೀಗನ್ ಎಂದೂ 'ಸ್ಯಾಮ್ಯುವೆಲ್' ಎಂದರೆ ಅಮೇರಿಕದ ರಕ್ಷಣಾ ಕಾರ್ಯದರ್ಶಿ ಕಾಸ್ಪರ್ ವೀನ್ ಬರ್ಗರ್ ಎಂದೂ ಕರ್ನಲ್ ನಾರ್ತ್ ಹೇಳಿಕೆಯಿತ್ತಿದ್ದಾರೆ. ಇರಾನ್ ಗೇಟ್ ಹಗರಣದ ಬಗ್ಗೆ ತನಗೇನೂ ತಿಳಿಯದು ಎಂದು ನಟಿಸುತ್ತಿರುವ ಅಧ್ಯಕ್ಷ ರೀಗನ್ ಎಂತಹ ಸತ್ಯವಾದಿ ! ○

ಅಮೇರಿಕಾದಿಂದ ಸೈನಿಕ ನೆಲೆ ಬಳಕೆಗೆ ಗ್ರೀಸ್ ವಿರೋಧ

ಗ್ರೀಸ್‌ನಲ್ಲಿರುವ ಅಮೇರಿಕಾದ ಸೈನಿಕ ನೆಲೆಗಳನ್ನು ಬೇರೆ ಯಾವುದೇ ರಾಷ್ಟ್ರದ ವಿರುದ್ಧ ಸೈನಿಕ ಕಾರ್ಯಾಚರಣೆಗಾಗಿ ಬಳಸಲು ಅಮೇರಿಕಾಕ್ಕೆ ತಾನು ಅವಕಾಶ ನೀಡುವುದಿಲ್ಲವೆಂದು ಗ್ರೀಕ್ ಸರ್ಕಾರ ಸ್ಪಷ್ಟಪಡಿಸಿದೆ. ಸೈನಿಕ ನೆಲೆಗಳನ್ನು ಬಳಕೆಗೆ ಕುರಿತಾದ ಒಪ್ಪಂದದಲ್ಲಿ ಒಳಗೊಂಡಿರದ ಯಾವುದೇ ಉದ್ದೇಶಗಳಿಗಾದರೂ ಈ ನೆಲೆಗಳನ್ನು ಉಪಯೋಗಿಸಲು ಅಮೇರಿಕಕ್ಕೆ ಬಿಡಲಾಗುವುದಿಲ್ಲವೆಂದು ಗ್ರೀಕ್ ಸರಕಾರದ ವಕ್ತಾರರು ಘೋಷಿಸಿದ್ದಾರೆ. ●

ಮಹಾರಾಷ್ಟ್ರ - ಆದಿವಾಸಿಗಳ ಹೋರಾಟ

"ಭಯಪಡಬೇಡಿ ಹೋರಾಟ ಮುಂದುವರೆಸಿ"-ಮಹಾರಾಷ್ಟ್ರ ರಾಜ್ಯ ರಿಝರ್ವ್ ಪೋಲೀಸ್ ಪಡೆಗಳ ಗುಂಡಿಗೆ ಬಲಿಯಾಗುತ್ತಾ ಲಕ್ಷ್ಮಣ್ ಬಗುಲ್ ಉದ್ಗರಿಸಿದ ಕೊನೆಯ ಮಾತುಗಳಿವು. ನಾಸಿಕ್ ಜಿಲ್ಲೆಯ ಸುಗರ್ಗಾಣಾ ತಾಲೂಕಿನ ಒಂದು ಹಳ್ಳಿಯಲ್ಲಿ ಶಾಂತಿಯುತ ಪ್ರದರ್ಶನ ನಡೆಸುತ್ತಿದ್ದ ಸಾವಿರಾರು ಆದಿವಾಸಿಗಳ ಮೇಲೆ ರಿಝರ್ವ್ ಪೋಲೀಸ್ ಪಡೆಗಳು ಜೂನ್ 12ರಂದು ಅನಾವಶ್ಯಕವಾಗಿ 50 ಸುತ್ತು ಗುಂಡುಹಾರಿಸಿದರಿಂದಾಗಿ ಸಿ.ಪಿ.ಐ.(ಎಂ)ನ ಯುವಕ ಕಾರ್ಯಕರ್ತ ಲಕ್ಷ್ಮಣ್ ಬಗುಲ್ ಕೊಲ್ಲಲ್ಪಟ್ಟು ಇತರ ಐದು ಮಂದಿಗೆ ತೀವ್ರಗಾಯಗಳಾಗಿವೆ.

1978ರಲ್ಲಿ ಮಹಾರಾಷ್ಟ್ರ ಸರ್ಕಾರ ಬೀಳು ಅರಣ್ಯ ಭೂಮಿಯನ್ನು ಬೇಸಾಯ ಮಾಡಿಕೊಂಡು ಬರುತ್ತಿದ್ದ ಆದಿವಾಸಿಗಳಿಗೆ ಕೊಡುವುದಾಗಿ ಒಪ್ಪಿದ್ದರೂ ಅದನ್ನು ಜ್ಯಾರಿಗೆ ತರುವ ಗೋಜಿಗೇ ಹೋಗಲಿಲ್ಲ. ಇದರ ವಿರುದ್ಧ ಸಿ.ಪಿ.ಐ. (ಎಂ) ಹಾಗೂ ಕಿಸಾನ್ ಸಭಾ ನೇತೃತ್ವದಲ್ಲಿ ನಡೆದ ಆದಿವಾಸಿಗಳ ಸತತ ಹೋರಾಟದ ಫಲವಾಗಿ ಇದೇ ಮೇ 26ರಂದು ಜಿಲ್ಲಾ ಕಲೆಕ್ಟರ್ ಹಾಗೂ ಅರಣ್ಯಾಧಿಕಾರಿಗಳ ಜತೆ ನಡೆದ ಮಾತುಕತೆಯಲ್ಲಿ ಒಂದು ಒಪ್ಪಂದ ಕೈಬರಲಾಯಿತು. ಈ ಪ್ರಕಾರ ಕಿಸಾನ್ ಸಭಾ ತನ್ನ ಚಳುವಳಿಯನ್ನು ಸಸ್ಪೆಂಡ್ ಮಾಡಿತು. ಆದರೆ ಸರ್ಕಾರ ಮತ್ತೆ ಎರಡೇ ವಾರದೊಳಗೆ ಅದನ್ನು ಮುರಿಯಿತು.

ಬಂಡವಾಳಶಾಹಿಗಳ ಲಾಭಕ್ಕಾಗಿ ಕಾಡುಗಳನ್ನು ಬೇಕಾಬಿಟ್ಟಿ ಕಡಿಯುವುದು ಮತ್ತು ಅರಣ್ಯಾಧಿಕಾರಿಗಳ ಭ್ರಷ್ಟಾಚಾರ ಈ ಪ್ರದೇಶದ ಆದಿವಾಸಿಗಳು ಎತ್ತಿದ್ದ ಇನ್ನೊಂದು ಪ್ರಶ್ನೆ. ಈ ರೀತಿ ಕಾಡು ಕಡಿದು ಆ ಅಪರಾಧದ ಹೊಣೆಯನ್ನು ಆದಿವಾಸಿಗಳ ತಲೆಗೆ ಕಟ್ಟಲಾಗುತ್ತಿತ್ತು. ಇದರ ವಿರುದ್ಧ ಹೋರಾಟದ ಭಾಗವಾಗಿ ಸಿ.ಪಿ.ಐ.(ಎಂ) ಹಾಗೂ ಕಿಸಾನ್ ಸಭಾ ನೇತೃತ್ವದಲ್ಲಿ ಮರದ ದಿಮ್ಮಿಗಳನ್ನು ಸಾಗಿಸುವ ಲಾರಿಗಳನ್ನು ತಡೆಯುತ್ತಿದ್ದುದು ಮಾತ್ರವಲ್ಲದೆ, ಭ್ರಷ್ಟಾಚಾರದ ತನಿಖೆ ಮಾಡಬೇಕೆಂದು ಒತ್ತಾಯಿಸುತ್ತಿದ್ದುದು ಸರ್ಕಾರವನ್ನು ಕುಪಿತಗೊಳಿಸಿತ್ತು. ಆದಿವಾಸಿಗಳಲ್ಲಿ ಭಯ ಹುಟ್ಟಿಸಿ ಈ ಹೋರಾಟವನ್ನು ಹೊಸಕಿಹಾಕಲು ಮಾಡಿದ ಪೂರ್ವಯೋಜಿತ ಕೃತ್ಯ ಜೂನ್ 12ರ ಗೋಳೀಬಾರು ಎಂಬುದು ಈಗ ಸ್ಪಷ್ಟವಾಗಿದೆ.

ಆದರೆ ನಂತರ ಜೂನ್ 16 ರಂದು ನಾಸಿಕ್‌ನ ಜಿಲ್ಲಾ ಕಚೇರಿಯೆದುರು ಹಾಗೂ ಅರಣ್ಯಾಧಿಕಾರಿಯ ಕಚೇರಿಯೊಳಗೆ, ಜೂನ್ 17ರಂದು ಗೋಳೀಬಾರು ನಡೆದ ಪ್ರದೇಶದಲ್ಲಿ ಹಾಗೂ ಜೂನ್ 23ರಂದು ಮುಂಬೈಯಲ್ಲಿ ನಡೆದ ಪ್ರತಿಭಟನಾ ಮತ ಪ್ರದರ್ಶನಗಳು ಸ...ಘದ ಉದ್ದೇಶ ಪೂರ್ಣವಾಗಿ ವಿಫಲಗೊಂಡಿದೆಯೆಂಬುದನ್ನು ತೋರಿಸಿಕೊಟ್ಟವೆ. ಕಾ. ಲಕ್ಷ್ಮಣ್ ಬಗುಲ್ ಬಯಸಿದಂತೆ ಹೋರಾಟ ದ್ವಿಗುಣ ಶಕ್ತಿಯಿಂದ ಮುಂದುವರಿಯುತ್ತಿದೆ. ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ಹಾಗೂ ಚಳುವಳಿಯ ಬೇಡಿಕೆಗಳ ಬಗ್ಗೆ ಮಾತುಕತೆಗೆ ಸರ್ಕಾರ ಒಪ್ಪಬೇಕಾಗಿ ಬಂದಿದೆ. ಹೋರಾಟವನ್ನು ತೀವ್ರಗೊಳಿಸಲು ಕಿಸಾನ್ ಸಭಾ ಹಾಗೂ ಸಿ.ಪಿ.ಐ.(ಎಂ) ನಿರ್ಧರಿಸಿವೆ. ●

ತ್ರಿಪುರಾ-ಜನರಿಗೆ ಪರಿಹಾರ ಒದಗಿಸುವ ಕ್ರಮಗಳು

ತ್ರಿಪುರಾದ ಎಡರಂಗ ಸರ್ಕಾರ ನಾಲ್ಕು ಎಕ್ರೆ ಅಥವಾ ಅದಕ್ಕಿಂತ ಕಡಿಮೆ ಜಮೀನು ಹೊಂದಿರುವ ರೈತರಿಗೆ ಭೂಕಂದಾಯದಿಂದ ಪೂರ್ಣ ವಿನಾಯಿತಿ ನೀಡಲು ನಿರ್ಧರಿಸಿದೆ. ಕೇಂದ್ರ ಸರ್ಕಾರದ ಧೋರಣೆಗಳಿಂದಾಗಿ ರೈತರಿಗೆ ನ್ಯಾಯೋಚಿತ ಬೆಲೆ ಒದಗಿಸಲು ಅಥವಾ ಅವರನ್ನು ಮಾರುಕಟ್ಟೆ ಶಕ್ತಿಗಳ ದುಷ್ಪ್ರಭಾವದಿಂದ ರಕ್ಷಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯದ ಸುಮಾರು 80% ರೈತರಿಗೆ ಪ್ರಯೋಜನವಾಗಲಿದೆ.

ಗ್ರಾಮೀಣ ಜನತೆಗೆ ಆರೋಗ್ಯ ಪಾಲನೆ ಮತ್ತು ಔಷಧಿ ವ್ಯವಸ್ಥೆ ಸುಲಭವಾಗಿ ದೊರೆಯುವಂತೆ ಮಾಡಲು ಪ್ರತಿ ಹಳ್ಳಿಯಲ್ಲಿ ಒಂದು ಆರೋಗ್ಯ ಉಪಕೇಂದ್ರ ಸ್ಥಾಪಿಸುವ ಒಂದು ದೊಡ್ಡ ಕಾರ್ಯಕ್ರಮವನ್ನೂ ತ್ರಿಪುರಾ ಸರ್ಕಾರ ಹಮ್ಮಿಕೊಂಡಿದೆ. ಈ ಪ್ರತಿಯೊಂದು ಉಪಕೇಂದ್ರವಲ್ಲಿ ಒಬ್ಬ ಮಹಿಳೆಯೂ ಸೇರಿದಂತೆ ಇಬ್ಬರು ಆರೋಗ್ಯ ನೌಕರರು ಇರುತ್ತಾರೆ. ಮನೆ ಮನೆಗೆ ಹೋಗಿ ಆರೋಗ್ಯ ಪಾಲನೆ ಬಗ್ಗೆ ಜನರಿಗೆ ಶಿಕ್ಷಣ ನೀಡುವುದು, ಸಾಂಕ್ರಾಮಿಕಗಳು ಬರದಂತೆ ಮುಂಜಾಗ್ರತೆ ಕ್ರಮ ಹಾಗೂ ತಾಯಂದಿರ ಆರೋಗ್ಯ ರಕ್ಷಣೆ ಇವರ ಮುಖ್ಯ ಕರ್ತವ್ಯವಾಗಿರುತ್ತದೆ. ○

REG No. BGW-148 MAG (2) PRB DECR 319/-78-79

ಸಂಸತ್ತಿನಲ್ಲಿ ಕಾಂಗ್ರೆ ತಂತ್ರ ಫಲಿಸಲಿಲ್ಲ

(1ನೇ ಪುಟದಿಂದ)

ಪತ್ರಿಕೆಗಳು ವಿರೋಧ ಪಕ್ಷಗಳೂ ಕೂಡ ಸಂಸದೀಯ ಚರ್ಚೆಯನ್ನು ವಿಪರ್‍ಯಾಸಗೊಳಿಸಿವೆ ಎಂದು ಅವುಗಳ ಸಂಸದೀಯ ವರ್ತನೆಯ ಮೇಲೆ ಕೆಸರೆರಚಲು ಪ್ರಯತ್ನಿಸಿವೆ. ಆದುದರಿಂದ ವಿರೋಧ ಪಕ್ಷಗಳು ಸಂಸತ್ತಿನಲ್ಲಿ ಚರ್ಚೆ ನಡೆಯದಂತೆ ಮಾಡಿವೆ ಎಂಬ ಆರೋಪದ ಹುರುಳೇನು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕ. ಏಕೆಂದರೆ ವಿಧಾನ ಸಭೆ, ಲೋಕ ಸಭೆಗಳಲ್ಲಿ ನಮ್ಮ ಪ್ರತಿನಿಧಿಗಳ ವರ್ತನೆ ಹೇಗಿದೆ. ನೋಡಿ ಆದುದರಿಂದ. ರಾಜಕೀಯವೆಂದರೇ ಅಸಹ್ಯ ಎಂಬ ಭಾವನೆಯನ್ನು ರಾಜಕೀಯದ ಬಗ್ಗೆ ಅನಾಸಕ್ತಿಯನ್ನು ಬೆಳೆಸಲು ಹಲವಾರು ಶಕ್ತಿಗಳು ಕೆಲಸ ಮಾಡುತ್ತಿವೆ.

ಬೋಫೋರ್ಸ್ ಹಗರಣ, ಅದರ 1700 ಕೋಟಿ ರೂಗಳ ಬೃಹತ್ ವ್ಯವಹಾರ ಅದರಲ್ಲಿ ವಿನ್‌ಚಡ್ಡಾ ಎಂಬ ಏಜೆಂಟನ ಮೂಲಕ ಭಾರತದ ರಾಜಕಾರಣಿಗಳಿಗೆ ಚೆಲ್ಲಿರುವ ಹಣ ಅದನ್ನು ಸ್ವಿಸ್ ಬ್ಯಾಂಕಿನಲ್ಲಿ ಶೇಖರಿಸಿರುವುದು ಈ ಬಗ್ಗೆ ಭಾರತದ ನಗರಗಳಬೀದಿಬೀದಿಗಳಲ್ಲಿ ಕೊಂಪೆ ಹಳ್ಳಿಗಳಲ್ಲಿ ಚರ್ಚೆಯಾಗುತ್ತಿದೆ.ಪತ್ರಿಕೆಗಳು ದಿನಕ್ಕೊಂದರಂತೆ ಹೊಸ ಹೊಸ ಸಂಗತಿಗಳನ್ನು ಬಯಲಿಗೆಳೆಯುತ್ತಾ ನಡೆದಿದೆ. ಅವುಗಳಲ್ಲಿ ಕೆಲವು ಪಟ್ಟ ಭದ್ರ ಹಿತಾಸಕ್ತಿಗಳಾಗಿ ಪರ-ವಿರೋಧ ಗುಂಪುಗಳಾಗಿ ದಿನ ದಿನವೂ ವಾದ ಪ್ರತಿವಾದ ಹೂಡುತ್ತಿವೆ. ಇಷ್ಟೆಲ್ಲಾ ಆದರೂ ಈ ಹಗರಣ ಇನ್ನಿತರ ಕೆಲವು ಹಗರಣಗಳ ವಿವಿಧ ಮಗ್ಗುಲುಗಳು ಬೇರೆ ಬೇರೆ ಅಂಶಗಳು ಲೋಕಸಭೆಯಲ್ಲಿ ಚರ್ಚೆಯಾಗಿಲ್ಲ. ದೇಶದ ಎಲ್ಲಾ ವ್ಯವಹಾರವನ್ನು ನಿಯಂತ್ರಿಸುವ ಉಚ್ಚ, ಸಂಸ್ಥೆ ಲೋಕಸಭೆಯಲ್ಲಿ ಪತ್ರಿಕೆಗಳ ಮೂಲಕ ದೇಶದ ಸಾಮಾನ್ಯ ನಾಗರೀಕನ ಮುಂದೆಯೂ ಇರುವ ಅನೇಕ ವಿಷಯಗಳು ಮಂಡನೆಯಾಗಿಲ್ಲ. ಕಾಂಗ್ರೆಸ್ (ಐ) ಸರಕಾರ ತನ್ನ ಸರ್ಕಾರದ ಮಹಾನ್ ಮಹಾನಾಯಕರ ಲಂಪಟ ತನವನ್ನು ಮುಚ್ಚಿಕೊಳ್ಳಲು ಹೇಳಿರುವ ಸುಳ್ಳುಗಳನ್ನು ಬಿಟ್ಟರೆ ಬೇರೆ ಏನೂ ಲೋಕಸಭೆಯ ಮುಂದೆ ಮಂಡಿತವಾಗಿಲ್ಲ. ಕಾಂಗ್ರೆಸ್ (ಐ) ಲೋಕಸಭೆಯಲ್ಲಿರುವ ತನ್ನ ಪಶುಬಲವನ್ನು ಪಯೋಗಿಸಿ ಚರ್ಚೆಯನ್ನೇ ಕುಂಠಿತಗೊಳಿಸಲು ಪ್ರಯತ್ನಿಸಿದರೆ ಆಗ ವಿರೋಧ ಪಕ್ಷಗಳು ಏನು ಮಾಡಬೇಕು ? ಲೋಕ ಸಭೆಯೇ ಸರ್ವೋಚ್ಚ ಎಂದು ಸಾಧಿಸಲು ಸ್ವಾತಂತ್ರ್ಯಾನಂತರವೂ ಸೆರೆಮನೆ ವಾಸ ಹಿಂಸೆಗಳನ್ನು ಅನುಭವಿಸಿರುವ ಸಿ.ಪಿ.ಐ. [ಎಂ] ಏನು ಮಾಡಬೇಕು ? ಅದಕ್ಕಾಗಿಯೇ ಲೋಕಸಭೆಯಲ್ಲಿ ಬೋಫೋರ್ಸ್ ಚರ್ಚೆ ಹೊರತಾಗಿ ಈಗ ಇನ್ನಾವುದು ಮುಖ್ಯವಲ್ಲ. ಅದನ್ನು ಮಾಡಿದ ನಂತರವೇ ಇನ್ನುಳಿದ ಎಲ್ಲಾ ಚರ್ಚೆಯೂ ಎಂಬ ನಿಲುವನ್ನು ತಳೆಯಬೇಕಾಗಿ ಬಂದಿರುವುದು.ಇದೊಂದೇ ಈ ದಿಸೆಯಲ್ಲಿ ಭ್ರಷ್ಟಾಚಾರದ ಬಗ್ಗೆ ಬೆಳಕು ಚೆಲ್ಲಲ್ಲು ಏಕೈಕ ಮಾರ್ಗ.

ಇದರ ಜೊತೆಯಲ್ಲಿ ಹಿಂದಿನಅಧಿವೇಶನದಲ್ಲಿ ವಿರೋಧ ಪಕ್ಷಗಳು ಮಾಡಿದ ಒತ್ತಾಯಕ್ಕೆ ಮಣಿದಂತೆ ನಾಟಕವಾಡಿ ಬೋಫೋರ್ಸ್ ಹಗರಣದ ತನಿಖೆಗೆ ಸಂಸದೀಯ ಸಮಿತಿಯನ್ನ ರಚಿಸುತ್ತೇವೆ. ಎಂಬ ನಾಟಕ ಹೂಡಿರುವುದು. ಈ ಸಮಿತಿಯಲ್ಲಿಲೋಕಸಭೆ ರಾಜ್ಯಸಭೆ ಎರಡರಿಂದಲೂ 750ಕ್ಕೂ ಮಿಕ್ಕಿದ ಸದಸ್ಯರಿಂದ ಕೇವಲ21 ಜನ ಸದಸ್ಯರ ಸಮಿತಿ ಮಾಡುವುದು ಇದರಲ್ಲಿ ಪಕ್ಷಗಳ ಬಲವನ್ನಾಧರಿಸಿ ಲೋಕ ಸಭೆಗಿರುವ 14 ಸ್ಥಾನಗಳಲ್ಲಿ ಹನ್ನೆರಡು ಕಾಂಗ್ರೆಸ್ (ಐ) ನವರಿಗೆ ಬಿಟ್ಟು ಬಿಡುವುದು. ಇಂತಹ ಸಮಿತಿ ರಚಿಸಿದ ನಂತರ ಸಮಿತಿ ತನ್ನ ತನಿಖೆಯನ್ನು ಮುಗಿಸುವವರೆಗೂ ಸಂಸತ್ತಿನಲ್ಲಿ ಚರ್ಚೆಯನ್ನು ಮುಂದೂಡುವುದು. ಪ್ರಧಾನ ಮಂತ್ರಿಯವರ ಸಚಿವ ಸಂಪುಟದ ಅಡಿಪಾಯದಲ್ಲಿಯೇ ಕೊಳೆತು ದೇಶಕ್ಕೆಲ್ಲಾ ಹಬ್ಬಿರುವ ಗಬ್ಬು ನಾತವನ್ನು ಮುಚ್ಚಲು ಇದಕ್ಕಿಂತ ಬೇರೆ ನರಿತಂತ್ರ ಉಂಟೇ ?

ಸಂಸತ್ತಿನಲ್ಲಿ ಪ್ರಜಾಸತ್ತಾತ್ಮಕ ಚರ್ಚೆಯ ಉಸಿರು ಕಟ್ಟಿಸಲು ತಲೆಯ ಮೇಲೆ ತೂಗುತ್ತಿರುವ ಜನಾಭಿಪ್ರಾಯವೆಂಬ ಕತ್ತಿಯ ಕೂರಲಗಿನಿಂದ ತಪ್ಪಿಸಿಕೊಳ್ಳಲು ಮಾಡುವ ಈ ಪ್ರಯತ್ನವನ್ನು ಈ ಸಭೆಯ ಸದಸ್ಯರು ಮಾತ್ರವಲ್ಲ, ಈ ಸದಸ್ಯರನ್ನಾರಿಸಿದ ಇಡೀ ದೇಶದ ಜನರು ಪ್ರತಿಭಟಿಸಬೇಕು.

– ಜಿ. ಎನ್. ನಾಗರಾಜ್

ತಿದ್ದುಪಡಿ

ತಾ॥26-7-87ರ ಸಂಚಿಕೆಯ 4 ನೇ ಪುಟದಲ್ಲಿಯ ಲೇಖನದಲ್ಲಿಯ 3 ನೆಯ ಕಲಂನ 4ನೆಯ ಸಾಲಿನಲ್ಲಿ 'ಏಳು ಜನರು ಸೇರಿ'ನಾಲ್ವರುಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವವರು ಮೂವರು ಹೊರಗಿನವರು''ಎಂಬುದರ ಬದಲಾಗಿ, ಏಳು ಜನ ಕಾರ್ಮಿಕರು ಸೇರಿ, ಎಂದು ತಿದ್ದಿ ಕೊಳ್ಳಬೇಕು.

ರೈತ ಚಳವಳಿಯಶಸ್ವಿಮಾಡಿ

ತಮ್ಮ ಹನ್ನೆರಡು ಬೇಡಿಕೆಗಳಿಗಾಗಿ ಅಖಿಲ ಭಾರತ ಕಿಸಾನ್‌ಸಭಾದ ನೇತೃತ್ವದಲ್ಲಿ 1987 ಸೆಪ್ಟೆಂಬರ್7ರಿಂದ13 ರವರೆಗೆ ನಡೆಯಲಿರುವ ರೈತ ಮತ್ತು ಕೃಷಿ ಕಾರ್ಮಿಕರ ರಾಷ್ಟ್ರವ್ಯಾಪಿ ಪಿಕೆಟಿಂಗ್ ಚಳುವಳಿಗೆ ಜುಲೈ28ರಿಂದ 30ರವರೆಗೆ ಮೈಸೂರಿನಲ್ಲಿ ಸೇರಿದ ಸಿ.ಐ ಟಿ.ಯು. ಕರ್ನಾಟಕ ರಾಜ್ಯಮಂಡಳಿ ಸಭೆ ಸಂಪೂರ್ಣ ಬೆಂಬಲವನ್ನು ವ್ಯಕ್ತ ಪಡಿಸಿದೆ.

ಈ ವಾರ....

★ ಪ್ರಧಾನಿ ರಾಜೀವ್‌ಗಾಂಧಿ ಇಂದುಬೆಳಿಗ್ಗೆ ಅನಿರಿಕ್ಷೀತವಾಗಿ ನಡೆದ ಹಲ್ಲೆಯತ್ನದಿಂದ ಪಾರಾದರು. ಶ್ರೀಲಂಕಾಗೆ ಎರಡು ದಿನಗಳ ಅಧಿಕೃತ ಭೇಟಿಯ ನಂತರ ದೆಹಲಿಗೆ ಹಿಂತಿರುಗುವ ಮೊದಲು ಈ ಘಟನೆ ನಡೆಯಿತು. ಸ್ವಯಂಚಾಲಿತ ಬಂದೂಕನ್ನು ತಲೆಕೆಳಗಾಗಿ ಹಿಡಿದ ಯೋಧ ಅದನ್ನು ಪ್ರಧಾನಿಯತ್ತ ಬೀಸಿದ ಪ್ರಧಾನಿ ತಲೆ ತಗ್ಗಿಸಿದರಾದರೂ ಏಟಿನಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಜಯವರ್ಧನೆ ಯೋಧ ಬಿಸಿಲಿನ ಜಳದಿಂದ ಸುಸ್ತಾಗಿದ್ದ ಎಂದಿದ್ದಾರೆ.

-ಯು.ಎನ್.ಐ, ಪಿಟಿಐ ಜುಲೈ 31.

★ ತಮಿಳರ ಜನ ಸಂಖ್ಯೆ ಹೆಚ್ಚಿರುವ ಉತ್ತರ ಮತ್ತು ಪೂರ್ವ ಪ್ರಾಂತ್ಯಗಳ ವಿಲೀನ. 48 ಗಂಟೆಗಳಲ್ಲಿ ಉಗ್ರಗಾಮಿಗಳು ಮತ್ತು ಭದ್ರತಾ ಪಡೆ ನಡುವೆ ಕದನ ವಿರಾಮ. 72 ಗಂಟೆ ಅವಧಿಯಲ್ಲಿ ಉಗ್ರಗಾಮಿ ತಮಿಳರ ಶಸ್ತ್ರತ್ಯಾಗ ಕುರಿತು ಒಪ್ಪಂದಕ್ಕೆ ಪ್ರಧಾನಿ ರಾಜೀವ್‌ಗಾಂಧಿ ಮತ್ತು ಶ್ರೀಲಂಕಾ ಅಧ್ಯಕ್ಷ ಜಯವರ್ಧನ ಇಂದು ಸಹಿ ಹಾಕಿದರು.

ಪ್ರಜಾವಾಣಿ ಜುಲೈ 30.

★ ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಇಂದು ಬೋಫೋರ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಗದ್ದಲ ಮತ್ತು ವಾಗ್ಯುದ್ಧ ನಡೆದು ಉಭಯ ಸದನಗಳ ಸಭಾಧ್ಯಕ್ಷರು. ಕಲಾಪಗಳನ್ನು ಹಠಾತ್ತನೆ ಮುಕ್ತಾಯ ಗೊಳಿಸಿದರು. ಮರುದಿನವೂ ಘೋಷಣೆ ಮಾರ್ಮೊಳಗಿಸಿ ಸಿ.ಪಿ.ಎಂ ಸದಸ್ಯ ಅಜಯ್ ಬಿಸ್ವಾಸ್ ಮತ್ತು ತೆಲುಗುದೇಶಂನ ಪಿ.ರಾಧಾಕೃಷ್ಣರವರನ್ನು ನಿರ್ದಿಷ್ಟ ಕಾಲ ಸಸ್ಪೆಂಡ್ ಮಾಡಲಾಯಿತು.

-ಡೆಕ್ಕನ್ ಹೆರಾಲ್ಡ್ ಜುಲೈ 29, 30.

★ ಇತ್ತೀಚಿನ ದಿನಗಳ ಬೆಳವಣಿಗೆಗಳನ್ನು ಗಮನಿಸಿದಾಗ ಕರ್ನಾಟಕದ ನಂಜುಡಸ್ವಾಮಿ ನೇತೃತ್ವದ ರೈತ ಸಂಘ ಮತ್ತು ಬಹುಗುಣ ನೇತೃತ್ವದ ಲೋಕದಳ (ಬಿ) ಮಧ್ಯೆ ರಾಜಕೀಯ ಮೈತ್ರಿ ಉಂಟಾಗುವ ಸಾಧ್ಯತೆಯಿದೆ.

ಪ್ರಜಾವಾಣಿ. ಜುಲೈ 24.

★ ರಾಜೀವ್ ಗಾಂಧಿ ಬಿಕ್ಕಟ್ಟಿನಲ್ಲಿದ್ದಾರೆ ಎಂಬುದು ಸರಿಯಲ್ಲ. ಅವರೇ ಒಂದು ಬಿಕ್ಕಟ್ಟು.

-ಇಂಡಿಯಾ ಟುಡೇ

★ ಮತ್ತೆ ಚುನಾವಣೆ ನಡೆಸಿದರೆ ಕಾಂಗ್ರೆಗೆ 150ಸ್ಥಾನಗಳೂ ದಕ್ಕುವುದಿಲ್ಲ.

ಜ್ಯೋತಿ ಬಸು

★ ಮಂಡಲ ಪಂಚಾಯ್ತಿತಿಗೆ ದುಡ್ಡಿಲ್ಲ ಕೇವಲ ಒಂದು ಕುಚಿಣೀ 900ರೂ. ಒಟ್ಟು ಮಂಚ್ಚದ ಸಭಾಂಗಣದ ಅಲಂಕಾರಕ್ಕೆ ಮೇಜು ಕುರ್ಚಿಗಳಿಗೆ ಒಟ್ಟು ಎರಡೂವರೆ ಲಕ್ಷಕ್ಕೂ ಮಿಗಿಲಾಗಿ ಹಣ ಖರ್ಚಾಗಿದೆ.

—ಪ್ರಜಾವಾಣಿ ಜುಲೈ 25.

★ ಬೆಂಗಳೂರೂ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ಕಳೆದ 52 ದಿನಗಳಿಂದ ನಡೆಸುತ್ತಿರುವ ಮುಷ್ಕರಕ್ಕೆ ಬೆಂಬಲ ಸೂಚಿಸಿ ಎಲ್ಲ ಪಕ್ಷಗಳಿಗೆ ಸೇರಿದ 96 ಜನ ಶಾಸಕರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

—ಡೆಕ್ಕನ್ ಹೆರಾಲ್ಡ್ ಜುಲೈ 24.

ಹೊಸ ರಾಷ್ಟ್ರಪತಿಗಳ ಪಾತ್ರವೇನು ?

(1ನೇ ಪುಟದಿಂದ)

ಬಗ್ಗೆ ಎತ್ತಿದ ಪ್ರಶ್ನೆ ಹಾಗೂ ವಿ.ಪಿ. ಸಿಂಗ್ ಎತ್ತಿದ ಕೆಲವು ಆರ್ಥಿಕ ಪ್ರಶ್ನೆಗಳು— ಪ್ರಧಾನ ಮಂತ್ರಿಯವರು ದೊಡ್ಡ ಬಡಿಗೆಯೆತ್ತಲು ರಾಜಕೀಯ ವಿರೋಧದ ಈ ಎರಡು ಲಕ್ಷಣಗಳೇ ಸಾಕಾಯಿತು. ರಾಷ್ಟ್ರಪತಿ ಚುನಾವಣೆಯ ಮತ ಎಣಿಕೆ ಆರಂಭವಾಗುವ ಮೊದಲೇ ಮೂವರು ಮಾಜೀ ಮಂತ್ರಿಗಳನ್ನು ಶೋಕಾಸ್ ನೋಟೀಸ್‌ಕೂಡ ಇಲ್ಲದೆ ಹೊರದಬ್ಬಲಾಯಿತು. ಮತ ಎಣಿಕೆ ಆರಂಭವಾಗಿ ಮುಗಿಯುವುದರೊಳಗೆ "ನಾಮಕರಣಗೊಂಡ, ಚುನಾಯಿತವಲ್ಲದ– ಪಕ್ಷದ ವ್ಯವಸ್ಥೆಯೊಂದರ ಪ್ರಜಾಪ್ರಭುತ್ವ-ವಿರೋಧಿ ಹಾಗೂ ಪಾಳೆಯಗಾರಿ ಶೈಲಿ" ಯನ್ನು ವಿರೋಧಿಸಿ ವಿ.ಪಿ ಸಿಂಗ್‌ರ ಇನ್ನೊಂದು ಪತ್ರ. ತದನಂತರ ಆರಿಫ್‌ಮಹಮ್ಮದ್‌ಖಾನ್ ಮೇಲೆ ಯುವ ಕಾಂಗ್ರೆಸ್ ಮಂದಿಯ ಹಲ್ಲೆ, ಕೇಂದ್ರ ಮಂತ್ರಿ ಮಂಡಲದಿಂದ ಅರುಣ್‌ಸಿಂಗ್‌ರಾಜೀನಾಮೆ, ಪ್ರಧಾನಿಯವರ ಕೇಳಿಕೆಯ ಮೇರೆಗೆ ತನ್ನ ಮತ್ತು ತನ್ನ ತಮ್ಮನ ವಿರುದ್ಧ ಭ್ರಷ್ಟಾಚಾರದ ಆಪಾದನೆಗಳಿದ್ದ ಅಮಿತಾಬ್ ಬಚ್ಚನ್ ಲೋಕಸಭೆಯಿಂದ ರಾಜೀನಾಮೆ. ಕಾಂಗ್ರೆಸ್ ಪಕ್ಷದೊಳಗೆ ಗಂಭೀರ ರಾಜಕೀಯ ಮತ್ತು ಸಂಘಟನಾತ್ಮಕ ಬಿಕ್ಕಟ್ಟಿನ ಇಷ್ಟೊಂದು ಸೂಚನೆಗಳು ಒಂದೇ ದಿನದಲ್ಲಿ ಹಿಂದೆಂದೂ ಹೀಗೆ ಹೊರಬಂದಿರಲಿಲ್ಲ.

ಹೊಸದಾಗಿ ಚುನಾಯಿತರಾದ ರಾಷ್ಟ್ರಪತಿ ಆರ್. ವೆಂಕಟರಾಮನ್ ಈ ಹಿನ್ನೆಲೆಯಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ. ಚುನಾವಣಾ ಪ್ರಚಾರದ ಸಮಯದಲ್ಲಿ ವಿರೋಧೀ ಅಭ್ಯರ್ಥಿ ನ್ಯಾಯಮೂರ್ತಿ ಕೃಷ್ಣ ಐಯ್ಯರ್ ಎತ್ತಿದ ಪ್ರಶ್ನೆಗೆ ಇದು ಒಂದು ಹೊಸ ಆಯಾಮ ನೀಡಿದೆ. ರಾಜೀವ್‌ಗಾಂಧಿ ಹಾಗೂ ಅವರ ಮಂತ್ರಿ ಮಂಡಲದ ಸುತ್ತ ಈ ರೀತಿ ಮೋಡ ಮುಸುಕಿರುವಂತಹ ಸಮಯದಲ್ಲಿ ರಾಷ್ಟ್ರಪತಿಗಳ ಪಾತ್ರವೇನು ಎಂಬುದೇ ಆ ಪ್ರಶ್ನೆ.

ವೆಂಕಟರಾಮನ್ ಅವರನ್ನು ಅಭ್ಯರ್ಥಿಯಾಗಿ ನಿಲ್ಲಿಸುವಾಗ ಅವರು ತಮ್ಮ ರಬ್ಬರ್‌ಸ್ಟಾಂಪ್ ಆಗುವರೆಂಬ ನಿರೀಕ್ಷೆ ಪ್ರಧಾನ ಮಂತ್ರಿ ಹಾಗೂ ಅವರ ಮಂತ್ರಿಮಂಡಲದ್ದು. ಅವರ ಈ ನಿರೀಕ್ಷೆಯನ್ನು ಈಡೇರಿಸುವಂತೆ,ಜತೆಗೆ ತನ್ನ ಋಜುತ್ವದ ಇಮೇಜನ್ನು ಕೂಡ ರಕ್ಷಿಸಿಕೊಳ್ಳುವಂತೆ ಕಾರ್ಯ ನಿರ್ವಹಿಸಲು ಅವರಿಗೆ ಸಾಧ್ಯವಾದೀತೇ?ಅವರು ಪ್ರಧಾನ ಮಂತ್ರಿಗಳನ್ನು ವಜಾಮಾಡುವ ಹಕ್ಕನ್ನೇನೂ (ರಾಜಕಾರಣಿಗಳು ಮತ್ತು ಪತ್ರಿಕಾ ರಂಗದ ಕೆಲವು ವಿಭಾಗಗಳು ಜೈಲ್‌ಸಿಂಗ್‌ರನ್ನು ಒತ್ತಾಯಿಸಿದಂತೆ) ಆರೋಪಿಸಿಕೊಳ್ಳಬೇಕಾಗಿಲ್ಲ ಆದರೆ ಅಮಿತಾಭ್ ಬಚ್ಚನ್‌ರನ್ನು ಲೋಕಸಭೆಯಿಂದ ಗಂಟು ಮೂಟೆ ಕಟ್ಟಿಸಿ ಹೊರಡಿಸಿದ ಅವಮಾನಕಾರೀ ಬೆಳವಣಿಗೆಗಳೆದುರು ಅವರು ಮೂಕ ಪ್ರೇಕ್ಷಕರಾಗಿರಲು ಸಾಧ್ಯವೇ ?ಇಂದಿನ ಜ್ವಲಂತ ರಾಜಕೀಯ ಪ್ರಶ್ನೆಯಾಗಿ ಬಿಟ್ಟಿರುವ ಭ್ರಷ್ಟಾಚಾರದ ಆರೋಪಗಳನ್ನು ಕುರಿತಂತೆ ಸೂಕ್ತ ವಿಧಾನಗಳನ್ನು ಅವರು ಸೂಚಿಸಬೇಕಾಗಿದೆ.

ಮತದಾರರಿಗೆ ಬರೆದ ಪತ್ರದಲ್ಲಿ ಕೃಷ್ಣ ಐಯ್ಯರ್ "ಅತ್ಯುಚ್ಚ ಸ್ಥಾನಗಳಲ್ಲೇ ಭ್ರಷ್ಟಾಚಾರದ ಆರೋಪಗಳಿಂದ ಚಕಿತಗೊಂಡಿರುವ ರಾಷ್ಟ್ರೀಯ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳು ಯಾವ ಅಗತ್ಯ ಮಾಹಿತಿಯೂ ಇಲ್ಲದೆ ಕೈಕಟ್ಟ ಕುಳಿತಿರುವುದು ಸಾಧ್ಯವಿಲ್ಲ.ಅವರೇನೂ ಆತುರದ ಕ್ರಮಕ್ಕೆ ಧಾವಿಸಬೇಕಾಗಿಲ್ಲ ನಿಜ. ಆದರೆ ಆಡಳಿತದ ಮೇಲಿನ ಭರವಸೆ ಕುಂದದಂತೆ ನೋಡಿಕೊಳ್ಳಲು ತನ್ನ ಸ್ಥಾನದ ಬಲವನ್ನು ಅವರು ಬಳಸಬೇಕು" ಎಂದಿದ್ದರು. ತಾವಿನ್ನೂ ಕಾಂಗ್ರೆಸ್ಸಿಗರೇ ಎಂದು ಹೇಳಿಕೊಳ್ಳುವವರು ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರೇ ನೇರವಾಗಿ ಭ್ರಷ್ಟಾಚಾರದಲ್ಲಿ ಒಳಗಾಗಿದ್ದಾರೆ ಎಂದು ಆರೋಪಿಸುತ್ತಿರುವಾಗ ಕೃಷ್ಣ ಐಯ್ಯರ್‌ರವರ ಈ ಮಾತು ಇನ್ನಷ್ಟು ಮಹತ್ವ ಪಡೆಯುತ್ತಿದೆ. ರಾಷ್ಟ್ರಪತಿ ವೆಂಕಟರಾಮನ್ ಈ ವಾಸ್ತವತೆಗಳೆದುರು ಕಣ್ಣು ಮುಚ್ಚಿ ಕೂರಬಲ್ಲರೇ ?

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editor P· RamachandraRao
Editorial and Managerial Office : L-56, K. V. Temple Street,
Managing Editor : N. K. Upadhyaya